# ಕರ್ನಾಟಕ ಯಕ್ಷಗಾನ ಅಕಾಡೆಮಿ, ಬೆಂಗಳೂರು

www.karnatakayakshaganaacademy.com

ಪ್ರಾಯೋಜಕತ್ವದಲ್ಲಿ ಪ್ರಕಾಶಿತ

ಯಕ್ಷಗಾನ ಪ್ರಸಂಗ

# ಹರ್ಷ ಚರಿತ್ರೆ

ಕವಿ

## ಎಂ. ಆರ್. ಲಕ್ಷ್ಮೀನಾರಾಯಣ

ಅಂತರಜಾಲ ಆವೃತ್ತಿ ಸಹ-ಪ್ರಕಾಶಕರು ಮತ್ತು ಪ್ರಕಾಶನ ನಿರ್ವಾಹಕರು

ಯಕ್ಷವಾಹಿನಿ®

Email: yakshaprasangakosha@gmail.com

Blog: www.yakshaprasangakosha.com

ಆವೃತ್ತಿ ೧.೦ ಜನವರಿ ೨೦, ೨೦೨೦

ಯಕ್ಷವಾಹಿನಿ®

Email: yakshaprasangakosha@gmail.com, yakshavahini@gmail.com Blog: www.yakshaprasangakosha.com


## ಯಕ್ಷವಾಹಿನಿಯ ಯಕ್ಷಪ್ರಸಂಗಕೋಶ ಯೋಜನಾ ಸಮೂಹ

**ಗೌರವಾನ್ವಿತ ಸಂಪಾದಕ ಮಂಡಳಿ:**

ಶ್ರೀಧರ ಡಿ. ಎಸ್. (ಗೌರವಾಧ್ಯಕ್ಷರು), ಗಿಂಡೀಮನೆ ಮೃತ್ಯುಂಜಯ, ಡಾ. ಆನಂದರಾಮ ಉಪಾಧ್ಯ, ದಿನೇಶ ಉಪ್ಪೂರ, ಅಶೋಕ್ ಮುಂಗಳಿಮನೆ

**ಗೌರವಾನ್ವಿತ ಸಲಹಾ ಮಂಡಳಿ:**

ಅನಂತ ಪದ್ಮನಾಭ ಪಾಠಕ್, ವಿದುಷಿ ಸುಮಂಗಲಾ ರತ್ನಾಕರ್, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅವಿನಾಶ್ ಬೈಪಾಡಿತ್ತಾಯ, ಮಹೇಶ್ ಪದ್ಯಾಣ, ನಾರಾಯಣ ಹೆಬ್ಬಾರ್

**ಕಾರ್ಯಕಾರಿ ಮಂಡಳಿ:**

ರವಿ ಮಡೋಡಿ (ಯೋಜನಾಧ್ಯಕ್ಷ), ಡಾ. ಪ್ರದೀಪ್ ಸಾಮಗ (ಯೋಜನಾ ಕಾರ್ಯದರ್ಶಿ), ನಟರಾಜ ಉಪಾಧ್ಯ (ಯೋಜನಾ ಸಹಕಾರ್ಯದರ್ಶಿ), ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ ನಾ ಭಟ್, ಅಜಿತ್ ಕಾರಂತ್, ಇಟಗಿ ಮಹಾಬಲೇಶ್ವರ ಭಟ್, ಅಶ್ವಿನಿ ಹೊದಲ, ಶ್ರೀಕೃಷ್ಣ ಭಟ್ ಸುಣ್ಣಂಗುಳಿ, ವಿದ್ಯಾ ಹೆಗಡೆ ಕವಿತಾಸ್ಫೂರ್ತಿ, ಶಿವಕುಮಾರ ಬಿ. ಅಳಗೋಡು

**ಗೌರವಾನ್ವಿತ ಸ್ವಯಂಸೇವಕರು:**

ಗಣಪತಿ ಭಟ್ ಪಿ, ವಸುಮತಿ ಜಿ., ಅನಿತಾ ಎಂ. ಜಿ. ರಾವ್, ರಂಜನ ಭಟ್, ಶಶಿಕಲಾ ಮೂರ್ತಿ, ರಘುರಾಜ್ ಶರ್ಮ, ಚಂದ್ರ ಆಚಾರ್, ಸುಬ್ರಹ್ಮಣ್ಯ ಭಾಗವತ್, ಉಮೇಶ್ ಶಿರೂರು, ವೆಂಕಟೇಶ್ ಹೆಗಡೆ, ವೆಂಕಟೇಶ್ ವೈದ್ಯ, ಕೆ. ಗೋವಿಂದ ಭಟ್ ಬೆಂಗಳೂರು, ಸತೀಶ್ ಯಲ್ಲಾಪುರ, ಮಯೂರಿ ಉಪಾಧ್ಯಾಯ, ಶ್ರೀಕಾಂತ್ ನಾಯಕ್, ರವಿ ಕಾಮತ್ ಕುಮಟಾ, ರಾಮಕೃಷ್ಣ ಮರಾಠಿ

**ಸಹಕಾರ:**

**ಪ್ರಸಂಗ ಕವಿಗಳು:**

ಬಲಿಪ ನಾರಾಯಣ ಭಾಗವತ, ಹೊಸ್ತೋಟ ಮಂಜುನಾಥ ಭಾಗವತ, ಪ್ರೊ. ಎಮ್. ಎ. ಹೆಗಡೆ, ಡಾ. ಅಮೃತ ಸೋಮೇಶ್ವರ, ಶ್ರೀಧರ ಡಿ. ಎಸ್., ಎಂ. ಆರ್. ವಾಸುದೇವ ಸಾಮಗ, ಎಂ.ಆರ್. ಲಕ್ಷ್ಮೀನಾರಾಯಣ, ಮಧುಕುಮಾರ್ ಬೋಳೂರು, ಅಗರಿ ಭಾಸ್ಕರ ರಾವ್, ಅಂಬರೀಷ ಭಾರದ್ವಾಜ, ಶಿವಕುಮಾರ ಬಿ. ಅಳಗೋಡು, ದಿನೇಶ ಉಪ್ಪೂರ, ಗಿಂಡೀಮನೆ ಮೃತ್ಯುಂಜಯ, ಇಟಗಿ ಮಹಾಬಲೇಶ್ವರ ಭಟ್, ವಿಶ್ವವಿನೋದ ಬನಾರಿ, ಮಧೂರು ವೆಂಕಟಕೃಷ್ಣ

**ಕವಿಚರಿತ್ರೆ ಮತ್ತು ಪ್ರಸಂಗಯಾದಿ:**

ಡಾ. ಕಬ್ಬಿನಾಲೆ ವಸಂತ ಭಾರದ್ವಾಜ, ಡಾ. ಪಾದೇಕಲ್ಲು ವಿಷ್ಣುಭಟ್

**ಸಂಸ್ಥೆಗಳು:**

ಕರ್ನಾಟಕ ಯಕ್ಷಗಾನ ಅಕಾಡೆಮಿ & ಕನ್ನಡ ಮತ್ತು ಸಂಸ್ಕೃತಿ ಇಲಾಖೆ (ಕರ್ನಾಟಕ ಸರ್ಕಾರ), ಯಕ್ಷಗಾನ ಕಲಾರಂಗ, ಉಡುಪಿ, ಯಕ್ಷಸಿಂಚನ, ಬೆಂಗಳೂರು

**ಪ್ರಸಂಗ ಪುಸ್ತಕ ಒದಗಣೆ ಮತ್ತಿತರ:**

ಡಾ. ರಾಧಾಕೃಷ್ಣ ಉರಾಳ್, ಅಗರಿ ಭಾಸ್ಕರ ರಾವ್ , ಗೋಪಾಲಕೃಷ್ಣ ಭಾಗವತ್, ಶ್ರೀಪಾದಗದ್ದೆ, ಮುರಳಿ ಶ್ರೇಣಿ, ಅನಂತ ದಂತಳಿಕೆ, ಗುರುನಂದನ್ ಹೊಸೂರು, ನಾರಾಯಣ ಶಾನುಭಾಗ, ನಾರಾಯಣ ಯಾಜಿ, ಶೇಷಗಿರಿಯಪ್ಪ, ಎಸ್ ಎಮ್ ಹೆಗಡೆ, ದಿವಾಕರ ಹೆಗಡೆ, ನಿತ್ಯಾನಂದ ಹೆಗಡೆ ಮೂರೂರು, ಶ್ರೀನಿಧಿ ಡಿ.ಎಸ್, ರವೀಂದ್ರ ಐತುಮನೆ, ಗುರುರಾಜ ಹೊಳ್ಳ ಬಾಯಾರು, ಸುರೇಶ್ ಹೆಗಡೆ ಬೆಳಸಲಿಗೆ, ಮನೋಹರ ಕುಂದರ್, ನಂದಳಿಕೆ ಬಾಲಚಂದ್ರ ರಾವ್, ರಘುರಾಮ್ ಮುಳಿಯ, ಸುಧಾ ಕಿರಣ್ ಅಧಿಕಶ್ರೇಣಿ, ಮಹಾಬಲಮೂರ್ತಿ ಕೊಡ್ಲೆಕೆರೆ, ಎ. ಎನ್. ಹೆಗಡೆ, ಮುರಳೀಧರ ಉಪಾಧ್ಯ

## ಯಕ್ಷವಾಹಿನಿ ಸಂಸ್ಥೆ

**ಗೌರವಾನ್ವಿತ ಸಲಹಾ ಮಂಡಳಿ:**

ಮಲ್ಪೆ ಲಕ್ಷ್ಮೀನಾರಾಯಣ ಸಾಮಗ (ಗೌರವಾಧ್ಯಕ್ಷರು), ಶ್ರೀಧರ ಡಿ. ಎಸ್., ಗಿಂಡೀಮನೆ ಮೃತ್ಯುಂಜಯ, ದಿನೇಶ ಉಪ್ಪೂರ, ಡಾ. ಪ್ರದೀಪ ಸಾಮಗ, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅನಂತ ಪದ್ಮನಾಭ ಪಾಠಕ್, ವಿದುಷಿ ಸುಮಂಗಲಾ ರತ್ನಾಕರ್, ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ ನಾ ಭಟ್, ರಾಘವೇಂದ್ರ ಮಯ್ಯ (ಲೆಕ್ಕಪತ್ರ ಪರಿಶೋಧಕರು)

**ವಿಶ್ವಸ್ಥ ಮಂಡಳಿ ಮತ್ತು ಕಾರ್ಯಕಾರಿ ಮಂಡಳಿ:**

ಡಾ. ಆನಂದರಾಮ ಉಪಾಧ್ಯ (ಅಧ್ಯಕ್ಷ), ನಟರಾಜ ಉಪಾಧ್ಯ (ಕಾರ್ಯದರ್ಶಿ), ರವಿ ಮಡೋಡಿ (ಖಜಾಂಚಿ)

**ಆರ್ಥಿಕ ಸಹಾಯ:**

ಅಶೋಕ್ ಕೊಡ್ಲಾಡಿ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ

**ಪುಸ್ತಕ ಸಹಾಯ:**

ವಿದುಷಿ ಸುಮಂಗಲ ರತ್ನಾಕರ್, ಮಂಟಪ ಪ್ರಭಾಕರ ಉಪಾಧ್ಯ, ಡಾ. ಆನಂದರಾಮ ಉಪಾಧ್ಯ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ

# ಮೊದಲ ಮಾತು

ಯಕ್ಷಗಾನ ಪ್ರದರ್ಶನಗಳಿಗೆ ಆಧಾರವಾಗಿರುವುದು ಪ್ರಸಂಗಸಾಹಿತ್ಯ. ಅದು ಯಕ್ಷಗಾನದ ಏಕಮಾತ್ರ ಲಿಖಿತಸಾಹಿತ್ಯವೂ ಹೌದು. ಅದರ ಅಭಾವದಲ್ಲಿ ಯಕ್ಷಗಾನದ ಅಡಿಪಾಯವೇ ಇಲ್ಲವಾಗುತ್ತದೆ. ಈಗ ಅಂದಾಜಿಸಿದಂತೆ ಇಂಥ ಪ್ರಸಂಗಕೃತಿಗಳ ಸಂಖ್ಯೆ ಐದು ಸಾವಿರಕ್ಕೂ ಮಿಕ್ಕಿದೆ. ವರ್ಷವರ್ಷವೂ ನೂರಾರು ಹೊಸಕೃತಿಗಳ ಸೇರ್ಪಡೆಯಾಗುತ್ತಲೇ ಇವೆ. ಆದರೆ ವಿಷಾದದ ಸಂಗತಿಯೆಂದರೆ ಸೂಕ್ತವಾದ ವಿತರಣಾ ವ್ಯವಸ್ಥೆಯಿಲ್ಲ. ಬೇಕೆಂಬುವರಿಗೆ ಪ್ರಸಂಗಗಳು ಲಭಿಸುತ್ತಿಲ್ಲ. ಅನೇಕ ಪ್ರಾಚೀನ ಅರ್ವಾಚೀನ ಕೃತಿಗಳಿಗೆ ಮುದ್ರಣ ಭಾಗ್ಯವಿಲ್ಲ. ಮುದ್ರಿತವಾದ ಕೃತಿಗಳ ಮಾರಾಟ ಮತ್ತಷ್ಟು ತೊಡಕಿನದು. ಹೀಗಾಗಿ ಈಗಾಗಲೇ ಅನೇಕ ಕೃತಿಗಳು ನಾಶವಾಗಿವೆ; ಮತ್ತಿಷ್ಟು ನಾಶವಾಗುತ್ತಿವೆ.

ಯಕ್ಷಗಾನ ಪ್ರಸಂಗಗಳು ಕನ್ನಡಸಾಹಿತ್ಯದ ಶ್ರೀಮಂತಿಕೆಯ ದ್ಯೋತಕಗಳು. ಕನ್ನಡದಲ್ಲಿ ಬೆಳೆದು ಬಂದ ಛಂದೋ ವೈವಿಧ್ಯದ ಸಾರವನ್ನೆಲ್ಲ ಹೀರಿಕೊಂಡು ಸುಪುಷ್ಟವಾಗಿ ಬೆಳೆದು ನಿಂತ ಈ ಸಾಹಿತ್ಯ ಪ್ರಕಾರವು ಕನ್ನಡಕ್ಕೊಂದು ಹೆಮ್ಮೆ. ಅದರ ಸಿದ್ಧಿ ಸಾಧನೆಗಳನ್ನು ಕುರಿತು ಗಂಭೀರವಾದ ಅಧ್ಯಯನದ ಆವಶ್ಯಕತೆಯಿದೆ. ಆದರೆ ಪ್ರಸಂಗಳ ಅಲಭ್ಯತೆ ಅಧ್ಯಯನಕ್ಕೆ ತೊಡಕಾಗಿದೆ. ಅಧ್ಯಯನಕ್ಕೆ ತೊಡಗುವವರಿಗೆ ಕೃತಿಗಳನ್ನು ಸಂಗ್ರಹಿಸುವುದೊಂದು ದೊಡ್ಡ ಸವಾಲಾಗಿದೆ. ಇದರಿಂದ ಯಕ್ಷಗಾನಕ್ಕೆ ತನ್ಮೂಲಕ ಕನ್ನಡ ಸಾಹಿತ್ಯಕ್ಕೆ  ಹಾನಿಯಾಗುತ್ತಿದೆ.

ಇದನ್ನು ಮನಗಂಡ ಯಕ್ಷಗಾನ ಅಕಾಡೆಮಿಯು ಮಹತ್ವಾಕಾಂಕ್ಷೆಯ ಯೋಜನೆಯೊಂದನ್ನು ಕೈಗೊಂಡಿದೆ. ಅದೇ ಯಕ್ಷಗಾನ ಪ್ರಸಂಗಗಳ ಡಿಜಿಟಲೀಕರಣ. ಎಲ್ಲ ಪ್ರಸಂಗಗಳನ್ನು ಡಿಜಿಟಲೀಕರಣಕ್ಕೊಳಪಡಿಸಿ ಅಕಾಡೆಮಿಯ ವೆಬ್ಸೈಟಿನ ಮೂಲಕ ಆಸಕ್ತರಿಗೆ ಉಚಿತವಾಗಿ ತಲುಪಿಸುವ ವ್ಯವಸ್ಥೆ ಇದು. ಪ್ರಪಂಚದ ಯಾವುದೇ ಮೂಲೆಯಲ್ಲಿದ್ದರೂ ಬೇಕಾದ ಕೃತಿಯನ್ನು ಪಡೆದುಕೊಳ್ಳಲು ಯಕ್ಷಗಾನ ಪ್ರಸಂಗವನ್ನು ತೆಗೆದುಕೊಂಡು ಯಕ್ಷಗಾನ ಮಾಡುವವರಿಗೆ ಅತ್ಯಂತ ಅನುಕೂಲ. ಅಧ್ಯಯನಕ್ಕೂ, ಸಂಗ್ರಹಕ್ಕೂ ಅನುಕೂಲ ಹಾಗೂ  ಯಕ್ಷಗಾನ ಪ್ರಿಯರಿಗೆ ಆಪ್ತವಾದೀತೆಂದು ಭಾವಿಸಿದ್ದೇವೆ.

ಇದನ್ನು ಕಾರ್ಯಗತಗೊಳಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನೆರವು ದೊಡ್ಡದು. ಈ ಕಾರ್ಯಕ್ಕೆ ಯಕ್ಷವಾಹಿನಿ ಸಂಸ್ಥೆಯು ಕೈಜೋಡಿಸಿರುವುದು ಹಾಗೂ ಪುಸ್ತಕರೂಪದಲ್ಲಿ ಯಕ್ಷಗಾನ ಪ್ರಸಂಗವನ್ನು ಸಿದ್ಧಗೊಳಿಸಿಕೊಡುತ್ತಿದೆ. ಇದಕ್ಕೆ ಅಕಾಡೆಮಿಯ ಸರ್ವಸದಸ್ಯರ ಸಹಮತವಿದೆ. ಈ ಯೋಜನೆಯನ್ನು ಕೃತಿರೂಪಕ್ಕೆ ತರಲು ಸಹಕರಿಸಿದವರೆಲ್ಲರನ್ನೂ, ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರನ್ನೂ, ಸರ್ಕಾರವನ್ನೂ ಹೃತ್ಪೂರ್ವಕವಾಗಿ ನೆನೆಯುತ್ತೇವೆ.



**ಪ್ರೊ. ಎಂ. ಎ. ಹೆಗಡೆ**
ಅಧ್ಯಕ್ಷರು
ಕರ್ನಾಟಕ ಯಕ್ಷಗಾನ ಅಕಾಡೆಮಿ



**ಎಸ್. ಎಚ್. ಶಿವರುದ್ರಪ್ಪ**
ರಿಜಿಸ್ಟ್ರಾರ್
ಕರ್ನಾಟಕ ಯಕ್ಷಗಾನ ಅಕಾಡೆಮಿ

## ಯಕ್ಷಪ್ರಸಂಗಕೋಶ ಯೋಜನೆ

ಕನ್ನಡ ಕಾವ್ಯದ ಚರಿತ್ರೆಯಲ್ಲಿ ಬಹುದೊಡ್ಡ ಸ್ಥಾನ ಪಡೆಯಬೇಕಾದ ಕೃತಿಗಳು ಅವಜ್ಞೆಗೊಳಗಾದುದನ್ನು ಗಮನಿಸಿ ಯಕ್ಷವಾಹಿನಿ ಸಂಸ್ಥೆಯಿಂದ ಯಕ್ಷಪ್ರಸಂಗಕೋಶದ ನಿರ್ಮಾಣವಾಗುತ್ತಿದೆ. ಯಕ್ಷಗಾನ ಪ್ರಸಂಗಗಳು ಪ್ರಯೋಗದ ಆಧಾರ ಪಠ್ಯಗಳು. ವ್ಯಾಖ್ಯಾನದ ಅಗತ್ಯವೂ ಇರುವುದರಿಂದ ಪ್ರಸಂಗಕವಿಗಳು ಬರೆದ ಗೀತೆಗಳು ಗುಣಮಟ್ಟದಲ್ಲೂ ಮೇಲಾಗಿದ್ದು ವಿದ್ವಾಂಸರಿಂದ ಮರಳಿ ಮರಳಿ ವ್ಯಾಖ್ಯಾನಕ್ಕೆ ಒಳಗಾಗಿವೆ. ಇಂತಹ ಪಠ್ಯಗಳನ್ನು ಖಿಲವಾಗದಂತೆ ಶಾಶ್ವತವಾಗಿ ಕಾಪಿಡುವುದೂ, ಜಾಗತಿಕ ಮಟ್ಟದಲ್ಲಿ ಲಭ್ಯವಾಗುವಂತೆ ಮಾಡುವುದೂ ನಮ್ಮ ಯಕ್ಷಪ್ರಸಂಗಕೋಶದ ಉದ್ದೇಶ. ಅದಕ್ಕೆ ಇಂದು ಅಂತರಜಾಲವೇ ಸೂಕ್ತ ಮಾಧ್ಯಮವಾಗಿದೆ. ಅಂತರಜಾಲದ ಮೂಲಕ ಪ್ರಕಟವಾದ ಪ್ರಸಂಗವೂ, ಅದನ್ನು ಸಿದ್ಧಪಡಿಸಿದ ಸಂಸ್ಥೆಯೂ ಇಡೀ ವಿಶ್ವದ ಮುಂದೆ ನಿಂತಿರುತ್ತದೆ ಎಂಬ ಅರಿವನ್ನುಇಟ್ಟುಕೊಂಡೇ ಪ್ರಸಂಗಗಳನ್ನು ಸಿದ್ಧಪಡಿಸಿದ್ದೇವೆ.

ಪ್ರಸಂಗಗಳ ಪ್ರಸ್ತುತ ರೂಪದಲ್ಲಿ ಇರುವ ಮುದ್ರಣ ದೋಷಗಳು, ವ್ಯಾಕರಣ ದೋಷಗಳು, ಗ್ರಾಮ್ಯಶಬ್ದಗಳ ಬಳಕೆಯಿಂದಾದ ಶೈಥಿಲ್ಯ, ಶಬ್ದಗಳನ್ನು ಬಿಡಿಸಬೇಕಾಗಿದ್ದಲ್ಲಿ ಕೂಡಿಸಿ, ಕೂಡಿಸಬೇಕಾಗಿದ್ದಲ್ಲಿ ಬಿಡಿಸಿ ಉಂಟಾದ ದೋಷಗಳು, ಮಟ್ಟುಗಳ ಹೆಸರುಗಳಲ್ಲಿ ಕಣ್ತಪ್ಪಿನಿಂದ ನುಸುಳಿದ ದೋಷಗಳು, ಆಟ ಆಡಿಸುವಾಗ ಅನುಕೂಲಕ್ಕೆ ತಕ್ಕಂತೆ ಭಾಗವತರು ಸೇರಿಸಿಕೊಂಡ ಅನ್ಯ ಪ್ರಸಂಗಗಳ ಪದಗಳು ಮುದ್ರಿತರೂಪದಲ್ಲಿ ಸೇರಿಹೋಗಿರುವುದು, ಮುದ್ರಣವಾಗುವಾಗ ಕೆಲವು ಪದಗಳು ಬಿಟ್ಟುಹೋಗಿರುವುದು ಇವುಗಳೆಲ್ಲ ಕವಿಯು ಶ್ರಮವಹಿಸಿ ರಚಿಸಿದ ಸುಂದರ ರಚನೆಯಲ್ಲಿ ಅರ್ಥಾಂತರವನ್ನೋ, ಅಪಾರ್ಥವನ್ನೋ ಉಂಟುಮಾಡುವ ಸಾಧ್ಯತೆಯಿದೆ. ಈಗ ಪ್ರಕಟಿಸುತ್ತಿರುವ ಪ್ರಸಂಗಗಳನ್ನು ಸಾಧ್ಯವಾದ ಮಟ್ಟಿಗೆ ಈ ದೋಷಗಳಿಂದ ಮುಕ್ತಗೊಳಿಸಿದ್ದೇವೆ ಎಂಬ ಭರವಸೆ ನಮಗಿದೆ. ಒಟ್ಟಿನಲ್ಲಿ ನಮ್ಮ 'ಪ್ರಸಂಗಕೋಶ'ದಿಂದ ಪಡೆದುಕೊಂಡ ಪ್ರಸಂಗವು ಶುದ್ಧವಾಗಿರಬೇಕೆಂಬುದೇ ನಮ್ಮ ಅಪೇಕ್ಷೆ.



**ಶ್ರೀಧರ ಡಿ. ಎಸ್.**
ಪ್ರಧಾನ ಸಂಪಾದಕರು



**ಗಿಂಡೀಮನೆ ಮೃತ್ಯುಂಜಯ**
ಸಹ ಸಂಪಾದಕರು



**ರವಿ ಮಡೋಡಿ**
ಯೋಜನಾಧ್ಯಕ್ಷರು

## ಯಕ್ಷವಾಹಿನಿ

ಯಕ್ಷಗಾನವು ಕನ್ನಡ ಸಂಸ್ಕೃತಿಯ ಕಿರೀಟದಲ್ಲಿ ರಾರಾಜಿಸುತ್ತಿರುವ ದೊಡ್ಡ ನವಿಲುಗರಿಯು. ಅಖಂಡ ಕರ್ನಾಟಕದ ಯಕ್ಷಗಾನ ಪರಂಪರೆಯ ಹಿರಿಮೆ ಗರಿಮೆಗಳನ್ನು ಹೆಚ್ಚಿಸುವತ್ತ ಅಂತರಜಾಲದ ಸಾಧ್ಯತೆಗಳನ್ನು ಸದುಪಯೋಗಪಡಿಸಿಕೊಳ್ಳುವುದೇ ಯಕ್ಷವಾಹಿನಿ ಸಂಸ್ಥೆಯ ಮುಖ್ಯ ಕಾರ್ಯವಾಗಿದೆ. ಯಕ್ಷಪ್ರಸಂಗಯಾದಿ ಮತ್ತು ಯಕ್ಷಪ್ರಸಂಗಕೋಶ ಇವೆರೆಡು ನಾವು ಈಗಾಗಲೇ ತೊಡಗಿಸಿಕೊಂಡಿರುವ ಪ್ರಾಥಮಿಕ ಯೋಜನೆಗಳು. ಈ ಯೋಜನೆಗಳಿಗೆ ಬೆನ್ನೆಲುಬಾಗಿ ನಮ್ಮೊಂದಿಗಿರುವ ಎಲ್ಲಾ ವಿದ್ವಾಂಸರು, ಪ್ರಸಂಗಕವಿಗಳು, ಸ್ವಯಂಸೇವಕರು, ಪ್ರಾಯೋಜಕರು ಹಾಗೂ ಎಲ್ಲಾ ರೀತಿಯ ಬೆಂಬಲ ಮತ್ತು ಸಹಾಯ ನೀಡುತ್ತಿರುವ ವಿಶ್ವವ್ಯಾಪಿ ಯಕ್ಷಪ್ರೇಮಿಗಳಿಗೆ ವಿನಮ್ರ ಧನ್ಯವಾದಗಳು. ಪ್ರಾಯೋಜಕತ್ವ ಹೆಚ್ಚಿದಂತೆ ನಮ್ಮ ಇನ್ನೂ ಅನೇಕ ಕನಸುಗಳು ಯೋಜನೆಗಳಾಗಿ ಅನಾವರಣಗೊಳ್ಳಲಿವೆ. ನಿಮ್ಮ ಹೆಚ್ಚುತ್ತಿರುವ ಸಹಕಾರ, ಸಹಾಯ, ಬೆಂಬಲ ಮತ್ತು ಆಶೀರ್ವಾದಕ್ಕೆ ನಾವು ಚಿರಋಣಿಗಳು.

**ಪ್ರೊ. ಮಲ್ಪೆ ಲಕ್ಷ್ಮೀನಾರಾಯಣ ಸಾಮಗ, ಗೌರವಾಧ್ಯಕ್ಷರು**

**ಡಾ. ಆನಂದರಾಮ ಉಪಾಧ್ಯ, ಕಾರ್ಯಾಧ್ಯಕ್ಷ ಮತ್ತು ವಿಶ್ವಸ್ಥ**

**ನಟರಾಜ ಉಪಾಧ್ಯ, ಕಾರ್ಯದರ್ಶಿ ಮತ್ತು ವಿಶ್ವಸ್ಥ**

**ರವಿ ಮಡೋಡಿ, ಖಜಾಂಚಿ ಮತ್ತು ವಿಶ್ವಸ್ಥ**

# ಸಾರಾಂಶ

**ಪ್ರಸಂಗ ವಿಧ:**

ಐತಿಹಾಸಿಕ

**ಆಧಾರ ಗ್ರಂಥ:**

ಗೊತ್ತಿಲ್ಲ

**ಭಾಷೆ:**

ಕನ್ನಡ

**ಹಿಂದಿನ ಪ್ರಕಾಶನಗಳ ವಿವರ:**

ನೈಮಿಷ ಪ್ರಕಾಶನ, ಅಮಚಿ, ಶಿವಮೊಗ್ಗ ಜಿಲ್ಲೆ

**ಹಕ್ಕುಸ್ವಾಮ್ಯ ವಿವರ:**

ಈ ಅಂತರಜಾಲ ಆವೃತ್ತಿಯು ವಿಶ್ವದಾದ್ಯಂತ ಉಚಿತವಾಗಿ ಹಂಚಲ್ಪಡುವುದೇ ಜಂಟಿ ಪ್ರಕಾಶಕರ ಘನ ಉದ್ದೇಶವು. ಈ ಆವೃತ್ತಿಯನ್ನು ಹೇಗಿದೆಯೋ ಹಾಗೆಯೇ ಸಮಗ್ರವಾಗಿ ಮುದ್ರಿಸಲು ಯಾ ಅಂತರಜಾಲದ ಮೂಲಕ ಉಚಿತವಾಗಿ ಹಂಚಲು ಯಾವುದೇ ಅಭ್ಯಂತರ ಇಲ್ಲ. ಮೂಲ ಪ್ರಕಾಶನಗಳ ಹಕ್ಕುಸ್ವಾಮ್ಯ ಹೇಗಿದೆಯೋ ಹಾಗೆಯೇ ಉಳಿದಿರುತ್ತದೆ.

**ಒಟ್ಟು ಪದ್ಯಗಳು:**

೨೬೦

**ಪಾತ್ರಗಳು :**

ದಿನಕರವರ್ಮ, (ಅವನ) ರಾಣಿ, ಹರ್ಷವರ್ಧನ, ರಾಜ್ಯವರ್ಧನ, ಸುರಥ, ಸುಮತಿ, ಚಂಡಾಸುರ, ಶತಚಂಡ, ರಾಜ್ಯಶ್ರೀ, ದೇವಗುಪ್ತ, (ಅವನ) ಸತಿ, ಶಶಿಗುಪ್ತ, ಖಗಮಿತ್ರ ಋಷಿ, ಜಯಸೇನ, ಲಲಿತಾಕ್ಷ

**ಕಥಾ ಸಾರಾಂಶ:**

ರಾಜ ದಿನಕರವರ್ಮನ ಸೂಚನೆಯಂತೆ, ಹಿರಿಯಮಗ ರಾಜ್ಯವರ್ಧನ ಹೂಣರನ್ನು ಮರ್ದಿಸಲು ದಂಡೆತ್ತಿ ಹೋಗುತ್ತಾನೆ. ಯುದ್ಧಚಪಲತೆಯಿಂದ ತಮ್ಮನಾದ ಹರ್ಷವರ್ಧನ ಅಣ್ಣನನ್ನು ಸೇರುವುದರೊಳಗೆ ರಾಜನ ಅಸ್ವಸ್ಥತೆ ಅರಿತು ಹಿಂತಿರುಗುತ್ತಾನೆ. ತಂದೆ ಮಡಿದು, ತಾಯಿ ಚಿತೆಯೇರುವಳು; ರಾಜ್ಯವರ್ಧನ ಹೂಣರಾಜ ಶತಚಂಡನೊಡನೆ ಜಯಗಳಿಸಿ, ಹಿಂತಿರುಗಿ ಸಂತಾಪಿಸಿ, ವೈರಾಗ್ಯ ತಳೆದು ಹರ್ಷನಿಗೆ ಪಟ್ಟಗಟ್ಟುವಾಗ ತಂಗಿಯ ಗಂಡನನ್ನು ಮಾಳವದ ದೊರೆ ದೇವಗುಪ್ತ ಕೊಂದ ಸುದ್ದಿ ಕೇಳಿ ಮತ್ತೆ ಸೈನ್ಯದೊಡನೆ ಹೋಗಿ ಆತನನ್ನು ಜಯಿಸಿದರೂ ಮೋಸದಿಂದ ರಾಜ್ಯವರ್ಧನ ಕೊಲ್ಲಲ್ಪಡುತ್ತಾನೆ. ಹರ್ಷವರ್ಧನ ಕೆರಳಿ ಮಾಳವಕ್ಕೆ ಬಂದಾಗ, ಮಂತ್ರಿ ಶಶಿಗುಪ್ತ ಹೆದರಿ ಓಡುತ್ತಾನೆ. ಆದರೂ ತಂಗಿ ಸಿಗದೆ ಹರ್ಷ ವಿಷಾದದಿಂದಿರುತ್ತಾನೆ. ಅರಣ್ಯದಲ್ಲಿ ಮುನಿಯ ಶಿಷ್ಯನಿಂದ ತಂಗಿಯ ಇರವನ್ನು ತಿಳಿದು ಆಕೆ ಚಿತೆಯೇರುವ ಮುನ್ನ ತೆರಳಿ ಉಳಿಸಿಕೊಳ್ಳುತ್ತಾನೆ. ಮತ್ತೆ ಕೀರ್ತಿಗೆಂದು ಜೈತ್ರಯಾತ್ರೆಗೈದು ಕಾಮರೂಪದ ಜಯಸೇನನನ್ನು ಗೆದ್ದು, ಅವನಿಂದ ಶಿವನಿತ್ತ ಖಡ್ಗ ಪಡೆಯುತ್ತಾನೆ.

**ಕವಿ ಪರಿಚಯ:**

ಎಂ.ಆರ್. ಲಕ್ಷ್ಮೀನಾರಾಯಣ ಮಲೆನಾಡಿನ ಕವಿ. ಜನನ ೧೯೩೩ರಲ್ಲಿ, ತಂದೆ ಮುಂಡಗೇಸರ ರಾಮಕೃಷ್ಣ ಮತ್ತು ತಾಯಿ ಮಹಾಲಕ್ಷ್ಮಿ. ಮೂಲತಃ ಅಮಚಿ, ಸೊರಬ ತಾಲೂಕು, ಶಿವಮೊಗ್ಗ ಜಿಲ್ಲೆಯ ವಾಸಿ. ಕೃಷಿ ಕುಟುಂಬ. ತಾಳಮದ್ದಲೆ ಅರ್ಥಗಾರಿಕೆ, ಗಮಕ ವ್ಯಾಖ್ಯಾನಗಳಲ್ಲಿ ಹೆಸರಾದವರು. ಸಾಮಾಜಿಕ ಕ್ಷೇತ್ರಗಳಲ್ಲೂ ಗುರುತಿಸಿಕೊಂಡು ವ್ಯಕ್ತಿತ್ವ ಬೆಳೆಸಿಕೊಂಡವರು. ಈ ಪ್ರಸಂಗದ ಮುಂದುವರಿದ ಭಾಗದಂತಿರುವ "ಪುಲಿಕೇಶಿ ವಿಜಯ", ಇವರ ಇನ್ನೊಂದು ಕೃತಿ. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ, ಸೀತಾನದಿ ಗಣಪಯ್ಯ ಶೆಟ್ಟಿ ಪ್ರಶಸ್ತಿ, ಪೊಳಲಿ ಶಾಸ್ತ್ರಿ ಪ್ರಶಸ್ತಿ, ಇನ್ನೂ ಹಲವಾರು ಮನ್ನಣೆ ಗಳಿಸಿರುವವರು.

ಇವರು ಬರೆದ ಪ್ರಸಂಗಗಳು: ಪುಲಿಕೇಶಿ ವಿಜಯ, ಹರ್ಷ ಚರಿತ್ರೆ

**ಟಿಪ್ಪಣಿ :**

# ಪ್ರಸಂಗ ಸಾಹಿತ್ಯ

**ಶಾರ್ದೂಲವಿಕ್ರೀಡಿತ ವೃತ್ತ**
ಶ್ರೀನಾಥಂ ಮುನಿಸೇವಿತಂ ಕಮಲನಾಭಂ ಚಕ್ರಧಾರಿಂ ಹರಿಂ |
ಸ್ಥಾಣುಪ್ರೀತ ವಿರಿಂಚಿತಾತನಮರಾಧೀಶಾರ್ಚಿತಂ ಮಾಧವಂ ||
ಮೀನಾಂಕಾಧಿಕರೂಪ ದಾನವಕುಲಾರಿಂ ನಾರದಾದಿ ಸ್ತುತಂ |
ದೀನಾನಾಥವಿಭುಂ ಗಜೇಂದ್ರವರದಂ ಶ್ರೀವೆಂಕಟೇಶಂ ಭಜೇ || 1 ||

**ಭಾಮಿನಿ**
ಮಣಿದು ಮುರಲೀಧರನ ಚರಣಕೆ |
ಗಣಪಗೊಂದಿಸಿ ನುತಿಸಿ ವಾಣಿಯ |
ನೆನೆದು ಕಮಲಾಸನ ಪುರಾಂತಕ ಗಿರಿಜೆ ರಮೆಯರನು ||
ಮನದಿ ವಂದಿಸಿ ಗುರುವಿನಂಘ್ರಿಗೆ |
ವಿನಯದಿಂದಲಿ ಮತಿಯ ಬೇಡುವೆ |
ಜನಪ ಹರ್ಷನ ಕಥೆಯನೊರೆಯಲು ಯಕ್ಷಗಾನದಲೀ || 2 ||

**ಸೌರಾಷ್ಟ್ರ - ತ್ರಿವುಡೆ**
ಚರಿತೆಯಲಿ ಮೆರೆಯುತಿಹ ನೃಪರೊಳು |
ಹರುಷನಾಮದ ಶೂರ ಗುಣಯುತ |
ದೊರೆಯ ಕಥೆಯನು ಯಕ್ಷಗಾನದೊ | ಳೊರೆವೆನಿಂದು || 3 ||
ಇರುವುದೈವತ್ತಾರು ದೇಶದಿ |
ಮೆರೆವ ಥಾಣೇಶ್ವರದ ಪುರದೊಳು |
ದೊರೆಯು ದಿನಕರವರ್ಮ ಸದ್ಗುಣ | ಭರಿತನಿರಲು || 4 ||
ಹೂಣರೆಂಬರ ಗೆಲಲು ಜ್ಯೇಷ್ಠನು |
ಸೇನೆಯೊಂದಿಗೆ ಭರದಿ ತೆರಳಿರೆ |
ದಾನವನ ಧುರಕನುಜ ಹರ್ಷನು | ತಾನು ಪೋಗೆ || 5 ||
ದೊರೆಯು ಮಡಿಯಲು ಸುತರು ನಗರಕೆ |
ಮರಳಿ ಬಹು ಶೋಕದಲಿ ಮುಳುಗಿರೆ |
ಚರರು ಬಂದಾಕ್ಷಣದಿ ತಂಗಿಯ | ಪರಿಯ ಪೇಳೆ || 6 ||
ತೆರಳಿ ಗೆಲ್ಲುತ ರಾಜ್ಯವರ್ಧನ |
ಮರಣ ಹೊಂದಿದ ಮೋಸದಿಂದಲೆ |
ಹರುಷ ಧೈರ್ಯದಿ ಪೋಗಿ ತಂಗಿಯ | ನರಸಿ ತಂದ || 7 ||
ಧರಣಿ ಸುಖಸೌಭಾಗ್ಯದಿಂದಿರೆ |
ಹರುಷವರ್ಧನ ಕಾಮರೂಪವ |
ಧುರದಿ ಗೆಲ್ದನು ವೈರವಿಲ್ಲದ | ಸರಸದಿಂದ || 8 ||
ಇಂತು ಹರ್ಷನ ಚರಿತೆ ಈ ಪರಿ |
ಚಿಂತೆಗಳ ಕಾರ್ಮೋಡದಂಚಿಗೆ |
ಸಂತಸದ ಕೋಲ್ಮಿಂಚುಗಳು ಕೋ | ದಂತೆಸೆವುದು || 9 ||

**ಭಾಮಿನಿ**
ವರಸಚಿವನಾ ಸುಮತಿ ದಳಪತಿ |
ಸುರಥ ಮುಖ್ಯರ ಕೂಡಿಕೊಳ್ಳುತ |
ಗುರು ಮಹೀಸುರ ಮುಖ್ಯರಾಶೀರ್ವಚನಗಳ ಧರಿಸಿ ||
ಪರಮ ವಿಭವದಿ ದಿನಕರಾಖ್ಯನು |
ಭರದೊಳೋಲಗವಿತ್ತು ಕುವರರ |
ಕರೆಸುತುಸುರಿದ ರಾಜಕಾರ್ಯದ ಗೂಢ ನೀತಿಯನು || 10 ||

**ಕಾಂಬೋಧಿ - ಝಂಪೆ**

ಮಕ್ಕಳಿರ ಕೇಳಿ ಪೇಳುವೆನೊಂದು ಕಾರ್ಯವನು |
ಗಕ್ಕನೈದುತ ಹೂಣ ದೊರೆಯು ||
ರಕ್ಕಸರ ಮಾಯಕದಿ ನಮ್ಮವರ ಪೀಡಿಸುತ |
ಘಕ್ಕನೋಡುವ ಪಾಪಿಯಾತ || 11 ||
ಭರದಿಂದ ನೀ ತೆರಳಿ ದುರ್ಮದಾಂಧನ ಗೆಲಿಯು |
ತುರುತರದ ಶ್ರೇಯವನು ಪೊಂದಿ ||
ಮರಳಿಬಾರೆನೆ ರಾಜ್ಯವರ್ಧನ ವಿನೀತನಾ |
ಗೊರೆದ ಕೈಮುಗಿದು ವಿಷ್ಟರಕೆ || 12 ||
ಕೇಳಯ್ಯತಾತ ನೀ ಚಿಂತೆಯನು ಬಿಡುಮನದಿ |
ಖೂಳನನು ಸಂಹರಿಸಿ ನಾನು ||
ಲೀಲೆಯಲಿ ದುಷ್ಟರನು ಬಡಿದಟ್ಟಿ ಬರುವೆನೈ |
ಪಾಳೆಯವ ಕೊಂಡು ವಿಕ್ರಮದಿ || 13 ||
ಎನುತ ನೇಮವಗೊಂಡು ಜ್ಯೇಷ್ಠನು ಪೊರಡಲಾಗ |
ಲನುಜಾತ ಹರ್ಷವರ್ಧನನು ||
ರಣಚಪಲ ಕಾತರನು ಕಂದಿದಾನನದಿಂದ |
ಜನನಿಯನು ಕಾಣಲೈತಂದ || 14 ||

**ಕಂದ**

ಇನತೇಜದಿಂ ಮೆರೆವ ಕುವ |
ರನ ಮೊಗ ಕಂದಿದುದ ಕಾಣುತ ಯಶೋಮತಿಯುಂ ||
ಮನದ ದುಗುಡಮಂ ಮುಚ್ಚಿರು |
ವನೆನುತ ಮಗನ ಮಮತೆಯಲಿ ನುಡಿಸಿದಳಾಗಳ್ || 15 ||

**ಆನಂದಭೈರವಿ - ಆದಿ**

ಬಾರೆಲೆ ಮಮ ಹೃದಯಾಂಬುಧಿ ಚಂದಿರ |
ವೀರ ವಿವೇಕಾಮೃತಗುಣಮಂದಿರ ||
ನೀರೇಜವದನ ರಾಜೀವನಯನ |
ಚಾರು ವಸಂತಸುಮಲ್ಲಿಕಾರದನ || 16 ||
ಬಾ ಶುಕಸ್ಯಂದನ ಸನ್ನಿಭಸುಂದರ |
ಭೂಷಣ ದೂಷಣದೂರ ದುರಂಧರ ||
ಶ್ರೀಶ ಪದಾಂಬುಜ ಸೇವಾಶೀಲ |
ತೋಷಿಪ ಮಾತಾ ಸುಖಕರ ಲೀಲ || 17 ||
ವಿಧುಸಮ ಮುಖಮಂಡಲ ಕಂದಿದೆ ಏ |
ಕಿದು ಬಂದಿಹ ಚಿಂತೆಯದಾವುದು ಪೇ ||
ಳದೆ ಸುಡದಿರು ಈ ಮಾತೆಯ ಕರುಳ |
ಹದನ | ವನರಿಯೆನು ಪೇಳೆಲೆ ತರಳ || 18 ||

**ಮಧ್ಯಮಾವತಿ - ಏಕ**

ಎನೆ ತಾಯ ಮಡಿಲಲ್ಲಿ ಮೊಗವಿಟ್ಟು ನುಡಿದ |
ಜನನಿ ಕೇಳ್ ಪಿತನಾಜ್ಞೆಯಲಿ ಅಣ್ಣ ನಡೆದ ||
ಹನನಗೈಯಲು ಹೂಣರೆಂಬರನಿಂದು |
ರಣಕುತೂಹಲ ಕಾಡುತಿದೆಯೆನ್ನ ತಿಂದು || 19 ||
ಪಿತನಲ್ಲಿ ಪೇಳಿ ನೀನೊಲಿಸುತ್ತಲವನ |
ಮತವ ಮಾಡೆನಗೆ ಕೈಸಾರುವಂತೆ ಕದನ ||
ಅತಿ ಬೇಗ ಸೇರುವೆ ಸಂಗ್ರಾಮಕಣವ |
ಮತಿ ಮೋದಗೊಂಬುದು ಕೇಳೆನ್ನ ಪಣವ || 20 ||

ಹಿತದಿಂದ ಹರಸಿ ನೀಯೆನ್ನ ಕಳುಹಿದರೆ |
ವ್ರತಗೆಟ್ಟ ಖಳರನ್ನು ಕಂಗೆಡಿಪೆನರರೆ ||
ಪಥವ ಕಾಣಿಸುವೆ ಶೈಮಿನಿಯ ಬಾಗಿಲಿಗೆ |
ಕೃತಿಯ ತೋರಲು ತಾನೊದಗಿ ಬಂದ ಗಳಿಗೆ || 21 ||
ಅಕಟಕಟಾ ನೀನು ಧುರದಾಸೆಯಿಂದ |
ವಿಕಳನಾಗದಿರು ನೀ ಮತಿಯಲ್ಲಿ ಕಂದ ||
ಸುಖವೆಂದು ಬಗೆದೆಯ ಸಂಗ್ರಾಮದಂದ |
ಸುಕುಮಾರ ನೀನಿಲ್ಲಿಹುದು ಮೋದದಿಂದ || 22 ||

**ಮಾರವಿ - ಏಕ**
ಜನನಿಯೆ ಬಿಡು ಬಿಡು ಚಿಂತೆಯ ನಿನ್ನೀ |
ತನಯನು ಚಿಕ್ಕವನೆ ||
ಮನದಲಿ ಸಂಶಯ ತಾಳದೆ ಪರಸುತ |
ರಣಕೆನ್ನನು ಕಳುಹು || 23 ||

**ಮಧ್ಯಮಾವತಿ - ಏಕ**
ಪೋಗಿಹ ರಾಜ್ಯವರ್ಧನ ಕೇಳು ಮಾತ |
ಬೇಗನೈತರುವ ಸಂದೇಹವೇ ಖ್ಯಾತ ||
ಪೋಗಿ ನೀನವನ ಸೇರ್ವನಿತರೊಳಾತ |
ತಾಗಿದರಿಗಳ ಗೆಲ್ದು ಬಹನಗ್ರಜಾತ || 24 ||

**ಮಾರವಿ- ಏಕ**
ನೆರವಾಗುತಲಣ್ಣಗೆ ಹೂಣರ ಸಂ |
ಗರ ಪೂರೈಸುವೆನು ||
ಮರೆಮೋಸಗಳಗ್ರಜಗಾಗದ ತೆರ |
ಧುರದೊಳು ಕಾಯುವೆನು || 25 ||

**ಭಾಮಿನಿ**
ಮಗನ ಶೌರ್ಯವ ಕಂಡು ತನ್ನಯ |
ಬಗೆಯೊಳಾನಂದಿಸುತ ಹರ್ಷಗೆ |
ವಿಗಡ ಸೈನ್ಯವ ಪತಿಯ ನೇಮದಿ ಕೊಡಿಸುತಾ ಜನನಿ ||
ಮಗನೆ ಮಾನಿಸು ವೃದ್ಧ ಭೂಸುರ |
ಸುಗುಣ ಸಂಪನ್ನರನು ಮಗುಳೀ |
ಜಗದ ನಾರಿಯರೆನ್ನಸರಿಯೆಂದರಿತು ವರ್ತಿಪುದು || 26 ||

**ಸೌರಾಷ್ಟ್ರ - ತ್ರಿವುಡೆ**
ನತಜನರ ಕಾಯುತ್ತಲಸ್ತ್ರರ |
ಹಿತರ ಪೊರೆಯೆ ಕ್ಷಾತ್ರ ಧರ್ಮಕೆ |
ಮತವೆನುತಲಾ ವೀರ ಮಾತೆಯು | ಮತಿಯ ಪೇಳೆ || 27 ||
ಜನನಿ ನಿನ್ನಯ ನುಡಿಯು ಮಾನ್ಯ ವಿ |
ದನವರತ ಪಾಲಿಸುವೆ ನೀತಿಯ |
ರಣದಿ ಮೀರೆನು ಎನುತ ವಂದಿಸಿ | ಘನದೊಳಾಗ || 28 ||
ಭರದಿ ಸೇನಾಜಾಲ ಸಹಿತಲಿ |
ಹರುಷವರ್ಧನ ಕಡೆಯ ಕಾಲದ |
ಹರನ ಶೌರ್ಯವ ಮೆರೆಸುತೈತರೆ | ಧರಣಿ ನಡುಗೆ || 29 ||

**ವಾರ್ಧಕ**
ಹರುಷ ಬರುತಿರಲಿತ್ತ ರಾಜ್ಯವರ್ಧನ ಸೇನೆ |
ಭರದೊಳಗೆ ಹೂಣದೇಶವ ಪೊಕ್ಕು ಮುಂದರಿದು |
ಬರಲಲ್ಲಿ ಚಾರುತರ ನಂದನವ ಕಂಡು ಪೊಗೆ ತಡೆದ ಭಟರಂ ಬಡಿಯುತ ||
ಸೆರೆವಿಡಿದು ನಾಸಿಕಕೆ ಮಸಿಬಳಿದು ಬಂಧಿಸುತ |
ಕರಗಳಂ ಪೋಗಿ ನಿಮ್ಮೊಡೆಯಂಗೆ ಬಿನ್ನೈಸಿ |
ಬರಹೇಳಿ ಧುರಕೆನುತಲನಿಬರಂ ನೂಕೆ ಚರರೈತಂದು ಖಳಗೆ ನಮಿಸಿ || 30 ||

**ಕಾಪಿ - ಅಷ್ಟ**
ಕೇಳಯ್ಯ ಕರ್ಬುರರಾಯ ನಾವು |
ಪೇಳ್ವನುಡಿಯ ಭಾಳಲೋಚನ ಪ್ರಿಯ ||ಪಲ್ಲವಿ||
ಜಾಲವಲ್ಲಿದು ಕಂಡೆವಿಷ್ಟು | ದೈತ್ಯ |
ಪಾಲ ಲಾಲಿಸು ಮಾತ ನೀ ಮನಗೊಟ್ಟು ||
ಕಾಲನ ಪಡೆಯಂತೆ ಬಂತು | ಭೂಮಿ |
ಪಾಲ ರಾಜ್ಯವರನ ಬಲುಸೈನ್ಯವಿಂತು || 31 ||
ಪುರವಲ್ಲಿ ಥಾಣೇಶವಂತೆ | ಓರ್ವ |
ತರಳನು ಹೂಣರ ಮರ್ದಿಪನಂತೆ ||
ಭರದಿ ಬಾಗಿಲೊಳಗಡ್ಡಗಟ್ಟಿ | ದುಷ್ಟ |
ನರಗುರಿಗಳ ಸೊಕ್ಕ ಮುರಿದೆವು ಕುಟ್ಟಿ || 32 ||
ಒಡಗೊಂಡ ಬಲುಮಂದಿ ಬಂದು | ನಮ್ಮ |
ಬಡಿದು ಕೈಗಳ ಕಟ್ಟಿ ಮೂಗ ಮೇಲಿಂದು ||
ಕಡುಗಿ ಸುಣ್ಣದ ನಾಮವಿಟ್ಟು | ಹೀಗೆ |
ಝಡಿದು ನೂಕುತಲೆಮ್ಮ ಪೇಳಿದರಿಷ್ಟು || 33 ||
ಪೋಗಿ ನಿಮ್ಮೊಡೆಯನ ಕಂಡು | ಯುದ್ಧ |
ಕಾಗಿ ದೈತ್ಯರನೆಲ್ಲ ತಾ ಕೂಡಿಕೊಂಡು |
ಬೇಗದಿ ಬರಲೆಂದು ಮದದಿ | ಪೇಳ್ದ |
ರೀಗ ನಾವೆಲ್ಲರೊದಗುವ ಸಂಗರದಿ || 34 ||

**ಭಾಮಿನಿ**
ಎನುವ ಚಾರರ ನುಡಿಯ ಕೇಳುತ |
ಫಣಿಪನಂದದಿ ಖಳನು ಗರ್ಜಿಸಿ |
ಕೊನೆಯ ಕಾಲವು ಬಂದುದವರಿಗೆ ಹೂಣರಿಂದೆನುತ ||
ದನುಜರೆಲ್ಲರ ಧುರಕೆ ಬರಿಸುತ |
ಲನುಜ ಶತಚಂಡನನು ಕಾಣದೆ |
ಕಿನಿಸಿನಿಂದಲೆ ಚರರನಟ್ಟುತ ಕರೆಸಿದನು ಬೇಗ || 35 ||

**ಮಾರವಿ - ಏಕ**
ಅನುಜನ ಕೂಡುತ ಚಂಡನು ರೋಷದಿ |
ಮನುಜರ ಪಾಳೆಯವ ||
ಘನತರ ಮಾಯದಿ ಮುಸುಕಿರೆ ಪೇಳಿದ |
ದನುಜಗೆ ನೃಪತರಳ || 36 ||
ಫಡಫಡ ಖೂಳನೆ ನಿನ್ನಯ ಬಿಂಕವ |
ಬಿಡಿಸುವೆ ಬೇಗದೊಳು ||
ಮೃಡನನು ಜಾನಿಸು ಹರಣದ ಹಂಬಲ |
ಬಿಡುನಿಲ್ಲೈ ಧುರಕೆ || 37 ||
ಕೇಳುತ ಭುಜಗಳ ಹೊಯ್ಯುತ ಹೂಣರ |
ಪಾಲಕ ಹೂಂಕರಿಸಿ ||
ಶೂಲಿಯ ನೆನೆವರು ಯಾರೈ ನೂಕುವೆ |
ಕಾಲನ ಮನೆಗೀಗ || 38 ||

ಮಾಯಕವಿದ್ಯೆಯ ಮರೆಸುವೆ ಕರೆಸೈ |
ಕಾಯುವ ಕರ್ಬುರರ ||
ಸಾಯುವೆ ಸಂಗರ ಮುಖದಲಿ ತ್ಯಜಿಸೈ |
ಕಾಯದ ಮೋಹವನು || 39 ||
ಕರೆಸೈ ನಿನ್ನಯ ತಾತನ ಬೇಡವೊ |
ತರಳನೆ ಸಂಗರವು ||
ತೆರಳುತ ನಾರಿಯ ಗಡಣದ ಮುಂಗಡೆ |
ಮೆರೆಸೀ ಪೌರುಷವು || 40 ||

**ಭಾಮಿನಿ**
ದನುಜನೆಂದುದ ಕೇಳಿ ನೃಪಸುತ |
ಕನಲಿ ಶರಗಳ ತೂರೆ ಚಂಡನು |
ಜನಪಕುವರನ ಕಣೆಯ ಕಡಿಯುತ ಸಮರಕಿದಿರಾದ ||
ರಣದಿ ಚಂಡನ ಬಲವ ಚೂರ್ಣಿಸಿ |
ಮುನಿದು ಭೀಕರ ಸರಳ ಬಿಡಲಾ |
ದನುಜನೊಲೆಯುತ ಬಿದ್ದ ರಭಸಕೆ ರಸೆಯು ತಗ್ಗಾಯ್ತು || 41 ||

**ಕಂದ**
ಚಂಡಾಸುರ ಬೀಳ್ವುದನುಂ |
ಕಂಡಾಕ್ಷಣದೋಳ್ ಖಳಬಲ ಕಂಗೆಡೆ ಭಯದಿಂ ||
ಚಂಡಾನುಜ ಕೋದಂಡವ |
ಕೊಂಡಾತುರದೊಳ್ ತರಳಗೆ ತೂರಿದ ಸರಳಂ || 42 ||

**ಶಂಕರಾಭರಣ - ಮಟ್ಟೆ**
ಅರರೆ ಹುಲುನೃಪಾಲನಣುಗ ದನುಜರೊಂದಿಗೆ |
ಧುರವು ಸರಸದಾಟದೆಸುಗೆಯಲ್ಲ ಪಸುಳಗೆ ||
ತೆರಳಿ ನಿನ್ನ ಪಿತನ ಕರೆಸು ಬೇಗ ಬವರಕೆ |
ಮರುಳುತನದಿ ಹರಣ ಕೊಡುವೆ ಎನ್ನಬಾಣಕೆ || 43 ||
ಕಲಿತ ಮಾತು ಕಕ್ಕಬೇಡ ಖಳನೆ ಕೇಳೆಲೊ |
ಹಳೆಯ ನೀತಿ ಪೇಳ್ದ ನಿನ್ನ ಹಿರಿಯನೆಲ್ಲೆಲೊ ||
ಗೆಲಲು ತೃಣವನೆನ್ನ ಬೆರಳು ಸಾಲ್ವುದೀಗಲು |
ಕಳಿಪೆ ಸಿದ್ಧನಾಗು ಚಂಡನೆಡೆಗೆ ಪೋಗಲು || 44 ||
ದನುಜಪತಿಯ ಕೊಂದೆನೆಂಬ ಹೆಮ್ಮೆಯಿಂದಲಿ |
ರಣದೊಳಿಂದು ದೈತ್ಯಬಲವ ಗೆಲ್ದ ಗರ್ವದಿ ||
ಜನಪಕುವರ ಬಂದೆಯೆನ್ನ ಬಲುಹನರಿಯದೆ |
ಧನಪ ಸುರಪರೆಲ್ಲ ಬೆದರ್ವರೆನ್ನಸರಿಸದೆ || 45 ||
ಭಳಿರೆ ಬಲುಹುಗಾರನಹುದೊ ಬಲ್ಲೆ ನಿನ್ನನು |
ಹಲುಬಲೇಕೆ ನೋಡು ಬಿದ್ದ ಚಂಡನೆಂಬನು ||
ಕುಲವ ಸವರಿ ಬಲಿಯ ಕೊಡುವೆ ಭೂತವ್ರಾತಕೆ |
ತಲೆಯಕೊಂಬೆ ಬರಲಿ ದೈವ ಕರೆಯೊ ರಕ್ಷೆಗೆ || 46 ||
ಕನಲಿ ದೈತ್ಯ ಶರವ ಬಿಡಲು ತರಳ ತರಿದನು |
ದನುಜ ಗಿರಿಯನೆತ್ತಿ ಪೊಡೆಯೆ ಚೂರ್ಣಗೈದನು ||
ಅನಿತರಲ್ಲಿ ವೃಕ್ಷದಿಂದ ಬಡಿಯೆ ಕಡಿದನು |
ಘನಮದಾಂಧ ತೋಳನೆಗಹಿ ಬರಲು ತಡೆದನು || 47 ||

**ವಾರ್ಧಕ**
ಪರಿಪರಿಯ ಘನತರಾಯುಧಗಳಿಂ ವಿಧಗಳಿಂ |
ಉರಕೆರಗಿ ಶಿರ ಪಿಡಿವ ಚೆಂದದಿಂ ಬಂಧದಿಂ |
ಅರುಣ ಜಲ ಸೋರುತಿಹ ಘಾಯದಿಂ ಕಾಯದಿಂ ನೃಪತನುಜ ದನುಜರಾಗ ||
ಉರಿಮಸಗೆ ಮುಷ್ಟಿಪ್ರಹಾರದಿಂ ಭಾರದಿಂ |
ಬಿರಿಯುತಿರೆ ನಗವಬುಧಿ ಘೋಷದಿಂ ರೋಷದಿಂ |
ಧರೆಯದುರೆ ಪದಹತಿಯ ವ್ರಾತದಿಂ ಘಾತದಿಂ ರಣನೀತಿ ಖಾತಿಯಿಂದ || 48 ||

**ಭಾಮಿನಿ**
ಧುರದಿ ರಕ್ಕಸ ರಾಜ್ಯವರ್ಧನ |
ನುರುಬೆಗತಿನೊಂದಿರಲು ಯೋಚಿಸಿ |
ತೊರೆದು ಜಯದಾಸೆಯನು ಮಾಯಕದಿಂದ ಮರೆಯಾದ ||
ಧರಣಿಪಾತ್ಮಜ ಖಳನ ಕಾಣದ |
ಲರಸಿ ನಿಷ್ಫಲಮಾಗೆ ಸೈನ್ಯವು |
ಭರದಿ ಸಾರಲಿ ಪುರಕೆನುತ ಹೊಯ್ಸಿದನು ಡಂಗುರವ || 49 ||

**ಕೇದಾರಗೌಳ - ಅಷ್ಟ**
ಖಳರನ್ನು ಮರ್ದಿಸಿ ನೃಪಸೂನು ಬರುತಿರೆ |
ಜಲಜಾಪ್ತವರ್ಧನನು ||
ಬಳಲಿರೆ ರೋಗದಿ ಸಚಿವಂಗೆ ರಾಣಿಯು |
ಅಳಲುತ್ತ ಪೇಳ್ದಳಿಂತು || 50 ||
ಸುತರಿಲ್ಲ ರಾಜ್ಯದಿ ಚರರಟ್ಟು ಬೇಗದಿ |
ಪತಿಗೆ ನೋಡುವ ಬಯಕೆ ||
ಅತಿಯಾಗಿ ಪೀಡಿಸುತಿಹುದಿಂದು ಸಚಿವನೆ |
ಹಿತವಪ್ಪುದೈ ಕರೆಸು || 51 ||
ಶಿರವನ್ನು ತಗ್ಗಿಸಿ ಪೇಳಿದ ಸುಮತಿಯು |
ಭರದಿ ದೂತರನಟ್ಟುವೆ ||
ಕರೆತಪ್ಪರತಿವೇಗದಿಂದಲೆ ಚಿಂತಿಸ |
ದಿರೆನುತ ಪೊರಮಟ್ಟ || 52 ||
ಕರೆಸುತ್ತ ರಾಹುತಪಡೆಯನ್ನು ವಿಧಿಸಿದ |
ನರಸುತ್ತ ದೇಶವನು ||
ತರಳರ ವಹಿಲದಿ ಕರೆತಪ್ಪುದಿಲ್ಲಿಗೆ |
ದೊರೆಗಾದ ಪರಿಯ ಪೇಳಿ || 53 ||

**ಸೌರಾಷ್ಟ್ರ - ತ್ರಿವುಡೆ**
ತುರಗವೇರುತ ಚರರು ಬರುತಿರೆ |
ಹರುಷ ಮಾರ್ಗದಿ ರಚಿಸಿ ಬಿಡದಿಯ |
ಸರಸಿಯೊಳು ಮಿಂದರ್ಘ್ಯವೀಯುತ | ಹರಿಗೆ ನಮಿಸಿ || 54 ||
ಮುಗಿಸಿ ವಿಧಿಗಳ ಮುಂದೆ ಪೋಗಲು |
ಬಗೆದು ತನ್ನಯ ಸೇನೆಗರುಹಿದ |
ವಿಗಡರೀಗಲೆ ಪೊರಡಿ ದೈತ್ಯರ | ಜಗಳಕಾಗಿ || 55 ||
ಅನಿತರೊಳಗಾ ಚರರು ಕಾಣಿಸಿ |
ಜನಪಸುತಗೊಂದಿಸುತ ನುಡಿದರು |
ನೆನೆದು ನಿಮ್ಮಯ ನೋಡೆ ಬಯಸಿಹ | ಜನಕನಿಂದು || 56 ||
ಮಾತೆ ಚಿಂತೆಯಲಿಹಳು ತನ್ನಯ |
ಜಾತರಿಲ್ಲೆನುತಲ್ಲಿ ಮಂತ್ರಿಯು |
ಭೀತನಾಗಿಹ ಭರದಿ ಪೋಪುದು | ಖ್ಯಾತ ನೀನು || 57 ||

ಚರರ ನುಡಿಯನು ಕೇಳಿ ಹರ್ಷನು |
ಭರಿತ ದುಃಖದೊಳವಗೆ ಪೇಳಿದ |
ಭರದೊಳಣ್ಣನ ಕಂಡು ವಾರ್ತೆಯ | ನರುಹಿರಿಂದು || 58 ||
ಎನಲು ವಂದಿಸಿ ಚರರು ಪೋಗಲು |
ಮನದೊಳುಮ್ಮಳ ಮೇರೆಮೀರ್ದುದು |
ಜನಪ ಕುವರನ ಭರಿತ ಶೋಕವ | ನೆನಿತು ಪೇಳ್ವೆ || 59 ||
ಕಡುನಿರಾಶೆಯ ಘನವಿಷಾದದಿ |
ಪಡೆಯ ಮರಳಿಚಿ ಬೇಗ ಪುರಕೈ |
ದೊಡನೆ ಕಂಡನು ಶೋಕತಪ್ತರ | ಗಡಣಗಳನು || 60 ||

**ಭಾಮಿನಿ**

ಹರುಷವರ್ಧನ ಪುರವ ಸಾರುತ |
ಮರಣಶಯ್ಯೆಯೊಳಿರ್ದ ನಿಜಪಿತ |
ನಿರವ ಕಾಣುತ ಮೂರ್ಛೆಗೊಳಲಾಜನನಿಯುಪಚರಿಸಿ ||
ಶಿರವನಂಕದೊಳಿಟ್ಟು ಮೆಲ್ಲನೆ |
ಸೆರಗಿನಿಂದಲೆ ಬೀಸಿ ನೀರಿಂ |
ದೊರಸೆ ಕಂಗಳನಾಗ ಮೈಮುರಿದೆದ್ದ ಚೇತರಿಸಿ || 61 ||

**ಕೇದಾರಗೌಳ - ಝಂಪೆ**

ಜನಕಗೇನಾದುದಮ್ಮ | ಬೇಗ ನುಡಿ |
ಮನವು ಕಳವಳಿಪುದಮ್ಮ ||
ಎನಗೆ ನೀ ದಯದೊಳಮ್ಮ | ಪೇಳಿದನು |
ತನುವು ಕಂಪಿಸುವುದಮ್ಮ || 62 ||
ಮಗನೆ ಕಾತರವೇತಕೆ | ಮುಪ್ಪು ಬರೆ |
ಜಗದಲೆಲ್ಲರು ರೋಗಕೆ ||
ಒಗೆದು ಕಾಯವ ನೀಗಲು | ದಾರಿಯದು |
ಮುಗಿಸಿ ಬಾಳ್ವೆಯ ಹಂಬಲು || 63 ||
ಎಂಥ ನಿಷ್ಠುರಳು ನೀನು | ಮರಣವೆನೆ |
ಚಿಂತೆ ಮಾಳ್ಪನು ಮನುಜನು ||
ಇಂಥ ಸ್ಥೈರ್ಯವ ಕಾಣೆನು | ಈ ಭವದಿ |
ಎಂತು ತಾಳಿರುವೆ ನೀನು || 64 ||
ಮಣ್ಣಿನಿಂದಲೆ ಮಾಡಿದ | ಕಾಯವಿದು |
ಚಿಣ್ಣ ಕೇಳೆಲೊ ಚರ್ಮದ ||
ಬಣ್ಣ ಬಣ್ಣದ ಹೊದಿಕೆಯ | ಗೂಡುಗಳು |
ಮಣ್ಣ ಸೇರ್ವುದೆ ನಿಶ್ಚಯ || 65 ||
ಚಿನುಮಯಾತ್ಮಕನು ವರವ | ಕೊಟ್ಟಿರುವ |
ಜನನಿ ಕರ್ಮಕೆ ಕಾಯವ ||
ಮನುಜ ಧರ್ಮವು ರಕ್ಷಿಸೆ | ದೇಹವನು |
ಘನತೆಯಪ್ಪುದೆ ನಿಂದಿಸೆ || 66 ||
ಆದರಾಕಾಯವನ್ನು | ರಕ್ಷಿಪರೆ |
ಆದಿಯಲಿ ಮೋಹವನ್ನು ||
ಭೇದಿಸಲು ಬಲುಕಲ್ಮಷ | ಇಟ್ಟಿಹನು |
ಬಾಧಿಸೆ ತನುವಹರ್ನಿಶ || 67 ||
ಅರಿವನೆಂತಿದನು ತಾಯೆ | ಮತಿಯಲ್ಲಿ |
ಭರಿತವಾಗಿರಲು ಮಾಯೆ ||
ಮರೆವನೆಂತಿಹದ ಸುಖವ | ಭ್ರಾಂತಿಯಲಿ |
ನರನು ಚಿಂತಿಪನೆ ಪರವ || 68 ||

ಪರದ ಸಾಧನೆ ಬೀಜವು | ಮೊಳೆಯಲ್ಕೆ |
ಸುರಿವ ಕಷ್ಟಗಳೆ ವ್ಯಾಜವು ||
ಪರಮಸತ್ಯಾನುಭವದ | ಕಾಣ್ಕೆಯಲಿ |
ಹರಿವುದೀ ಮೋಹ ಭವದ || 69 ||

**ಮಧುಮಾಧವಿ - ತ್ರಿವುಡೆ**
ಅನಿತರೊಳಗಾನೃಪನು ಮಡಿಯಲು |
ಘನವಿರಾಗದಿ ರಾಣಿ ನುಡಿದಳು |
ತನಯ ದುಃಖವ ಸಹಿಸು ನಿರ್ಮಲ |
ಮನದೊಳಣ್ಣನ ಸೇವಿಸು || 70 ||
ಜನಕನಂದದಿ ಭಾವಿಸುತ ಬಲು |
ಘನತೆಯಿಂದಲೆ ಬಾಳಿ ಕೀರ್ತಿಯ |
ನನವರತ ಪೆರ್ಚಿಪುದೆನುತ ಕಂ |
ಬನಿಯೊರಸಿ ಮಗುಳೆಂದಳು || 71 ||
ಕಂದ ನೀನಳಲದಿರು ಪತಿಯೊಡ |
ನಿಂದು ಸೇರುವೆನೀಗ ವಹ್ನಿಯ |
ಕುಂಡದೊಳೆನಲು ಕಾತರಿಸುತವ |
ನೊಂದು ಮಾತೆಯೊಳೆಂದನು || 72 ||
ತಂದೆಯಗಲಿದ ನಮ್ಮ ಪೊರೆಯುವ |
ರಿಂದು ನೀನೆಲೆ ತಾಯೆ ತಬ್ಬಲಿ |
ಕಂದರೆನಿಸುವೆ ನೀನಳಿಯಲೀ |
ಗೆಂದು ಶೋಕದಿ ನುಡಿದನು || 73 ||
ಮಗನೆ ನಿಮ್ಮನು ನಾನು ಕಾಯ್ವೆನೆ |
ಜಗದ ಭಾರವ ಧರಿಸಿರುವನಾ |
ನಗಧರನೆ ಕಾಯ್ವನು ವಿಚಾರಿಸೆ |
ದುಗುಡಗೊಂಬುದಕೇನಿದೆ || 74 ||
ಬಗೆವೊಡಿದು ಘನವಂಶ ಪದ್ಧತಿ |
ಯೊಗೆವೆನೀ ಕಾಯವನು ಪಾವಕ |
ಮುಗಿಸಲೆನ್ನುತ ಚಿತೆಯನೇರಲು |
ಹೊಗೆಯೊಳಗಡಗಿತು ರೂಪವು || 75 ||

**ಭಾಮಿನಿ**
ಬಳಿಕ ಹರ್ಷನು ಭೂರಿ ಶೋಕದೊ |
ಳಿಳೆಯಪಾಲಗೆ ಮತ್ತೆ ಮಾತೆಗೆ |
ಕುಲದ ಕಟ್ಟಳೆಯಂತೆ ನಡೆಸಿದನಂತ್ಯವಿಧಿಗಳನು ||
ನಿಲಿಸಿ ಕಟಕವ ರಾಜ್ಯವರ್ಧನ |
ಪೊಳಲ ಪೊಗುತಿರೆ ಮೌನ ಮುದ್ರೆಯ |
ಮಲಿನ ಸೂತಕ ಪುರವ ಮುಸುಕಿರೆ ಬಂದನರಮನೆಗೆ || 76 ||

**ನೀಲಾಂಬರಿ - ರೂಪಕ**
ಕೇಳುತಲಣ್ಣನು ಬಂದುದ |
ನಾಳುತಲಿಮ್ಮಡಿ ದುಗುಡದಿ |
ತಾಳದೆ ಹರ್ಷನು ಬಂದನು | ಸೂಳವಿಸಿತು ಶೋಕ ||
ಕಂಬನಿ ಜುಗುಳುವ ಕಂಗಳ |
ತುಂಬಿದ ಕರುಣೆಯ ಭೂಮಿಪ |
ಸಂಭವನಣ್ಣನ ಪಾದದೊ | ಳಿಂಬುಗೊಳಿಸೆ ತನುವ || 77 ||

ಎತ್ತಿದ ತಮ್ಮನನಪ್ಪಿದ |
ನೊತ್ತಿದ ವಕ್ಷಕೆ ದುಃಖವಿ |
ದೆತ್ತಣದೇನಿದು ಕಂಬನಿ | ಯೊತ್ತಿದೆ ಕಂಗಳಲಿ ||
ಗೆದ್ದಿಹೆನಾಧುರ ಹೂಣರ |
ನದ್ದಿಹೆ ಶೈಮಿನಿ ಕೂಪಕೆ |
ಹೊದ್ದಿದೆ ಜಯವೆಮ್ಮನು ನಿ | ಶ್ಶಬ್ದವಿದೇನಿಲ್ಲಿ || 78 ||
ವಿಜಯೋತ್ಸವ ಕಾಲಕೆ ಗಜ |
ಬಜಿಸುವ ನಗರವು ಭೀಕರ |
ವಿಜನತೆಯಾಂತಿದೆ ನಮ್ಮೀ | ಪ್ರಜೆಗಳ ಸುಳಿವಿಲ್ಲ ||
ಜಾತರ ಸಂಭ್ರಮ ವೀಕ್ಷಿಸೆ |
ಹಾತೊರೆಯುತಲೈತಹ ನಿಜ |
ಮಾತಾಪಿತರನು ಕಾಣೆನಿ | ದೇತಕೆ ಎಲೆ ತಮ್ಮ || 79 ||
ಕೂರಲಗಂದದಿ ನುಡಿಗಳು |
ತೂರಲು ಹರ್ಷಗೆ ನಾಲಿಗೆ |
ಯಾರಿತು ಬೆಂದನು ಬಗೆಯಲಿ | ಪೇರಳಲಿಗೆ ಸಂದು ||
ಅರುಹುವೆನಿಂತೀ ಸಂಗತಿ |
ಭರದಲಿ ನೀನಸುರನ ಸಂ |
ಗರಮುಖಿನಾಗಲು ನಾನಾ | ಧುರಕತಿ ಹಂಬಲಿಸಿ || 80 ||
ದುರುಳ ನಿಶಾಚರನಾವಹ |
ಕರಸಿದೆನಮ್ಮನೊಳಪ್ಪಣೆ |
ಧರಿಸುತ ಬರುತಿರೆ ಮಾರ್ಗದಿ | ಚರರೈತಂದಾಗ ||
ಪಿತ ರೋಗದಿ ಬಳಲಿದ ಕೇ |
ಳುತ ವಾರ್ತೆಯ ಮರಳಿದೆ ನಾ |
ನತಿವೇಗದಿ ಪುರಸಾರಿದೆ | ಮತಿಭ್ರಮೆಗೊಂಡಿರಲು || 81 ||
ಮೃತ್ಯುವು ತಡೆಯದೆ ತಂದೆಯ |
ಸುತ್ತಿದ ಬಾಂಧವರೆಲ್ಲರ |
ಕತ್ತಲೊಳಿಕ್ಕಲು ನಿಶ್ಚಯ | ವೆತ್ತಸುಕೊಂಡೊಯ್ದು ||
ನಾನಾ ಪರಿಯಿಂದಲಿ ಯಾ |
ರೇನನು ಪೇಳ್ದರು ಕೇಳದೆ |
ತಾನೂ ಚಿತೆಯೇರ್ದಳು ಘನ | ಮಾನಿನಿ ನಿಜ ಜನನಿ || 82 ||
ನಿನ್ನೀ ಗೆಲುವನು ಹೆಮ್ಮೆಯೊ |
ಳಿನ್ನಾರಿಗೆ ಪೇಳುವೆ ಹಾ |
ಇನ್ನಿಲ್ಲವೊ ಮಮತೆಯನಿಧಿ | ಮುನ್ನಿಲ್ಲವೊ ಅಣ್ಣ ||
ಕಂದನ ಕಾರ್ಮುಕ ಲೀಲೆಯ |
ಕಂಡುರೆ ಹಿಗ್ಗುವ ಪ್ರೇಮದ |
ಸಿಂಧುವೆ ಬತ್ತಿತು ತಬ್ಬಲಿ | ಯೆಂದೆನಿಸದೆವಣ್ಣ || 83 ||

**ಕಂದ**

ಎಂದುದ ಕೇಳುತ ಜ್ಯೇಷ್ಠಂ |
ಬೆಂದು ಬಸಿರೊಳಗೆ ತಪಿಸುತ ತನ್ನೊಳು ತಿಳಿದಂ ||
ಒಂದರೆಗಳಿಗೆಯ ಬಾಳಿದು |
ಬಂಧು ಬಳಗ ಮೋಹಮಾಯೆಯ ಬಲೆಯಿದೆನುತಂ || 84 ||

**ಮಧುಮಾಧವಿ – ತ್ರಿವುಡೆ**

ಅನುಜ ಕೇಳೆಲೊ ತಂದೆ ಪೋಗಲು |
ಧನವು ಧಾರಿಣಿಯೊಂದನೊಯ್ಯದೆ |
ತನುಜರೆಮ್ಮನು ಕೂಡಿಕೊಳ್ಳದೆ |
ತನುವನಿಲ್ಲಿಯೆ ತೊರೆದನು || 85 ||

ಭೂಮಿಯಾಳುವೆನೆಂದು ಭ್ರಮೆಯಲಿ |
ಕಾಮಿಸುತ ಧನ ಧಾನ್ಯ ಮನದೊಳು |
ತಾಮಸದಿ ಮುಳುಗುತ್ತ ಮರೆಯುವ |
ರಾಮಹಿಮನಂಘ್ರಿಗಳನು || 86 ||
ದೇಶ ಕೋಶವ ನೀನೆ ಪಾಲಿಸು |
ಲೇಸಿನಿಂದಲೆ ಪೋಪೆ ಕಾಡಿಗೆ |
ಶ್ರೀಶನನು ಭಜಿಸುತ್ತ ನಿರತವು |
ನಾಶಗೈಯುವೆ ಭವ ಭಯ || 87 ||
ಎನಲು ಪೇಳ್ದನು ಹರ್ಷನಣ್ಣಗೆ |
ಜನಪವಂಶದಿ ನಾವು ಜನಿಸುತ |
ವನಕೆ ಪೋದರೆ ಕ್ಷಾತ್ರ ಧರ್ಮಕೆ |
ಸನುಮತವೆ ಪೇಳಗ್ರಜ || 88 ||
ಮರುಳೆ ಕ್ಷತ್ರಿಯ ವೈಶ್ಯ ಬ್ರಾಹ್ಮಣ |
ಬರಿದೆ ವಂಶದ ಮೋಹವೇತಕೆ |
ಪರಮಧರ್ಮವು ಮೋಕ್ಷಸಾಧನೆ |
ಧರೆಯ ಮೇಲಣ ಜೀವಿಗೆ || 89 ||
ಉಕ್ತವಾಗಿದೆ ಶಾಸ್ತ್ರಕರ್ಮವು |
ಶಕ್ತಿಯಿಂದಲೆ ಧರಣಿ ಪಾಲಿಸೆ |
ಮುಕ್ತಿ ಸಾಧ್ಯವು ಕ್ಷಾತ್ರಕುಲಜಗೆ |
ಯುಕ್ತಿ ಕರ್ಮದಿ ಯೋಗವು || 90 ||
ಜ್ಞಾನಪೊಂದದೆ ಮುಕುತಿ ದುರ್ಗಮ |
ಹೀನ ಬಂಧನವಿಹದ ಕರ್ಮವು |
ಮಾನವಗೆ ಭವರೋಗ ತಪ್ಪದು |
ಹಾನಿ ಮಾಯಾ ಪಾಶದಿ || 91 ||
ಮನುಜಗಾಶ್ರಮ ನಾಲ್ಕು ನೇಮವು |
ಕೊನೆಯ ಕಾಲದಿ ತಪವಗೈಯಲು |
ವನವ ಸಾರುತ ಶಾಸ್ತ್ರವಿಹಿತದಿ |
ಜನಪರಾಳ್ದರು ಪೂರ್ವದಿ || 92 ||
ಆರಿಗೀ ತನು ಚಿರವು ನಾಲ್ಕನೆ |
ದಾರಿ ಗಮಿಸಲು ಬರಿದೆ ಯೌವನ |
ಜಾರಿ ಪೋಗಲು ಜ್ಞಾನ ಪಡೆವುದು |
ಭೂರಿ ಭ್ರಮೆಯೈ ಮರ್ತ್ಯಗೆ || 93 ||
ಹಿಂದೆ ರಾಮನು ವನಕೆ ಪೋಗಲು |
ಬಂದನಾತನ ಜೊತೆಗೆ ಲಕ್ಷ್ಮಣ |
ಇಂದು ನಾ ಬಿಡೆ ನಿನ್ನ ಸಂಗವ |
ಬಂದುದೇ ಸ್ಥಿರ ಕಾಡಿಗೆ || 94 ||
ಕಾಡಕಷ್ಟವು ಪಸುಳೆಗೀಗಲೆ |
ಬೇಡ ನೀ ರಾಜ್ಯವನು ರಕ್ಷಿಸಿ |
ಸಾಧಿಸಿಹಸೌಖ್ಯವನು ಬಳಿಕಾ |
ಮಾಧವನ ಸೇವೆಯೊಳಿರು || 95 ||
ನಿನಗೆ ಬೇಡದ ಭವದ ಲೇಪವ |
ನೆನಗೆ ದಾಂಟಿಸೆ ಬೋಧೆ ಮಾಳ್ಪೆಯ |
ಎನಿತು ನುಡಿದೇನಿನ್ನು ಮಾಡಿದೆ |
ಮನದಿ ನಿಶ್ಚಯ ಬರುವೆನು || 96 ||

**ಭಾಮಿನಿ**
ಮೇದಿನಿಯನಾಳೆಂದು ಹರ್ಷಗೆ |
ಸೋದರನು ವೈರಾಗ್ಯ ಭಾವದಿ |
ಬೋಧಿಸುತಲಿರಲಾಗ ಕನ್ಯಾಕುಬ್ಜ ಪುರವರದ ||
ಮೇದಿನಿಪ ಗ್ರಹವರ್ಮ ಸಮರದಿ |
ಕಾದಿ ಮಾಳವನಿಂದ ಮಡಿದಾ |
ಸೋದರಿಯು ಸೆರೆಯೊಳಿಹ ವಾರ್ತೆಯ ಪೇಳಿದರು ಚರರು || 97 ||
ಗ್ರಹವರುಮನಳಿದನುಜೆ ಸೆರೆಯೊಳ |
ಗಿಹುದ ಕೇಳುತ ಮರುಗಿ ಮನದೊಳು |
ಸಹಜರಾಸಂಕಲ್ಪ ಸಡಿಲಾದುದನುಕಂಪದಲಿ ||
ವಿಹಿತವೇ ನಾವ್ ಮುಕ್ತಿಯಾಸೆಗೆ |
ಮಹಿಯ ತೊರೆದಾ ವನವ ಸೇರ್ವುದು |
ಸಹಿಸುವಳೆ ಪರದೇಶಿಯಾದಳು ತಂಗಿಯಿಂದಿನಲಿ || 98 ||

**ಸೌರಾಷ್ಟ್ರ - ತ್ರಿವುಡೆ**
ತಪಿಸೆ ಫಲವೇನನುಜ ಕೇಳೈ |
ನೃಪಕುಲಾಧಮ ದೇವಗುಪ್ತಗೆ |
ಸುಪಥದೋರುವೆ ಬೇಗ ಭಾಸ್ಕರ | ಜಾತನೆಡೆಗೆ || 99 ||
ರಿಪುವ ಭಂಗಿಸದಿರಲು ಸಹಜನೆ |
ಶಪಥವಿದು ಪುರ ಸಾರೆನೆನ್ನುತ |
ಕುಪಿತ ಕೇಸರಿಯಂತೆ ಜ್ಯೇಷ್ಠ ಕು | ಮಾರ ನುಡಿಯೆ || 100 ||

**ಪಂತುವರಾಳಿ - ಮಟ್ಟೆ**
ಅಣ್ಣ ಕೇಳು ನಿನ್ನಯ | ಬೆನ್ನಬಲಕೆ ಬರುವೆನು |
ಎನ್ನಲಾಗ ತಮ್ಮಗೆ | ಚಿಣ್ಣ ಬೇಡ ಸಮರಕೆ || 101 ||
ಪುರವ ನೀನು ಕಾಯ್ದಿರು | ದುರುಳನೇನ ಗೈದರು |
ಧುರದಿ ಖಳನ ತರಿವೆನು | ತರಳೆಯನ್ನು ತರುವೆನು || 102 ||
ಪೇಳುತಿಂತು ನೇಮವ | ಕಾಳಗಕ್ಕೆ ಸೇನೆಯ |
ಮೇಳದಿಂದಲೈದಿದ | ಮಾಳವಕ್ಕೆ ಮುತ್ತಿದ || 103 ||
ಚರರು ಕಂಡು ಭಯದಲಿ | ಅರಸಗರುಹೆ ನಯದಲಿ ||
ಧುರದಿ ನೀವು ಕೊಂದಗೆ | ತರಳ ಭಾವನವನಿಗೆ || 104 ||
ನಗರವನ್ನು ಮುತ್ತಿದ | ಬಗೆಗೆ ಭಯವ ಬಿತ್ತಿದ |
ಹಗೆಯು ಸುಲಭನಲ್ಲವೊ | ನಗೆಯ ಮಾತಿದಲ್ಲವೊ || 105 ||

**ಭಾಮಿನಿ**
ಕೇಳಿ ಕೋಪಿಸಿ ದೇವಗುಪ್ತನು |
ಮೂಳರಿರ ನೀವರಿಯ ಪೊಗಳುವ |
ನಾಲಿಗೆಯ ಸೀಳುವೆನು ಬಗುಳದೆ ತೊಲಗಿ ನೀವೆಂದ ||
ಕಾಳಗದ ಸನ್ನಹವನರಿದು ಸು |
ಶೀಲೆ ಶುಭಮತಿ ಲೋಲೆ ಗುಣಮಣಿ |
ಮಾಲೆ ಕಾಂತನ ಕರವ ಪಿಡಿದರುಹಿದಳು ಕಾತರಿಸಿ || 106 ||

**ಸೌರಾಷ್ಟ್ರ - ಅಷ್ಟ**
ಬೇಡವೀ ಛಲವಿನ್ನು | ಬೇಡುವೆ ಸೆರಗೊಡ್ಡಿ ಕಾಂತ ಕೇಳು || ತಪ್ಪ |
ಮಾಡಿದುದಾಯ್ತಿನ್ನು | ಕೇಡ ಕರೆಯ ಬೇಡ ಕಾಂತ ಕೇಳು || 107 ||
ಸೇಡಿಗೆ ಮನಗೊಟ್ಟು | ರೂಢಿಪಾಲನ ಕೊಂದೆ ಕಾಂತ ಕೇಳು || ಬಾಲೆ |
ಮಾಡಿದ ತಪ್ಪೇನು | ದೂಡಿದೆ ಸೆರೆಯಲ್ಲಿ ಕಾಂತ ಕೇಳು || 108 ||
ಹಿಂದೆ ರಾವಣ ಭೂಮಿ | ನಂದಿನಿಯಳನೊಯ್ದು ಕಾಂತ ಕೇಳು || ನೀತಿ |
ಯೆಂದರೆ ಕಿವಿಮುಚ್ಚಿ | ಸಂದನು ಸಮರದಿ ಕಾಂತ ಕೇಳು || 109 ||

ಚಂದಿರಾನ್ವಯದಲ್ಲಿ | ಸಂದ ನಹುಷನೆಂಬ ಕಾಂತ ಕೇಳು || ಆತ |
ನಿಂದ್ರಾಣಿಯ ಬಯಸೆ | ಬಂದುದುರಗಜನ್ಮ ಕಾಂತ ಕೇಳು || 110 ||
ಸತಿಯೆಂದ ಮಾತಿಗೆ | ಖತಿಯೇರಿ ಪೇಳ್ದನು ಕಾಂತೆ ಕೇಳು || ನಿನ್ನ |
ಕಥೆಗಳ ಬಲ್ಲೆನು | ಮತಿಗೆಟ್ಟು ಮಿತಿಮೀರ್ದೆ ಕಾಂತೆ ಕೇಳು || 111 ||
ಕ್ಷಿತಿಪನ ಪಂಥದಿ | ಮಥಿಸಿದೆನಲ್ಲದೆ ಕಾಂತೆ ಕೇಳು || ಅವ |
ನಿತೆಗಳುಪಿದನಲ್ಲ | ಪತಿಯೊಳಿಂತೊರೆವುದೆ ಕಾಂತೆ ಕೇಳು || 112 ||
ಆದುದಾಯ್ತೆರೆಯನಿ | ನ್ನಾದರು ಸುದತಿಯ ಕಾಂತ ಕೇಳು || ಮೈತ್ರಿ |
ಸಾಧಿಸುತೊಪ್ಪಿಸು | ಮೇದಿನಿ ಪಾಲಂಗೆ ಕಾಂತ ಕೇಳು || 113 ||
ಕಾದಿ ಗೆಲ್ದರು ಕೀರ್ತಿ | ಮೇಧವಪ್ಪುದು ನಿಜ ಕಾಂತ ಕೇಳು || ತಿಳಿದು |
ನೀ ಧರ್ಮವ ಮೀರಿ | ಪೋದರೆ ಎನ್ನಾಣೆ ಕಾಂತ ಕೇಳು || 114 ||
ಅರಸ ನೀನಬಲೆಯ | ತರಳ ವೃದ್ಧರ ಕಾಯ್ವುದು ಕಾಂತ ಕೇಳು | ಆಗ |
ಧುರಕೈದು ದೇಹವ | ತೆರಲಂಜದಿರ್ದರೆ ಕಾಂತ ಕೇಳು || 115 ||
ದೊರೆವುದು ಸತ್ಕೀರ್ತಿ | ಮೆರೆವುದು ಕುಲಸಿರಿ ಕಾಂತ ಕೇಳು | ಈಗ |
ಜರೆವುದು ಜಗನಿನ್ನ | ಹರಿಮೆಚ್ಚನೆಂದಿಗು ಕಾಂತ ಕೇಳು || 116 ||

**ಭಾಮಿನಿ**

ಸಾರು ನಡೆ ನಿನ್ನೊಳಗೆ ನೀತಿಯ |
ನಾರು ಕೇಳ್ವರು ಮಡದಿಯಂದುರೆ |
ಸೈರಿಸಲು ನಾಲಿಗೆಯ ಬಿಗು ತಪ್ಪಿದುದು ನಿನಗೆಂದ ||
ಭೂರಿ ನಯದಿಂದೆರಗಿ ತಡೆವಾ |
ನಾರಿಯನು ಕಾಲಿಂದ ನೂಕುತ |
ಮೀರಿ ಪೊರಟನು ಸಚಿವ ಶಶಿಗುಪ್ತಾದಿ ಭಟರೊಡನೆ || 117 ||

**ಕಂದ**

ಭೂರಿ ಕಟಕಮಂ ನೃಪ ಕೊಂ |
ಡಾರುಭಟಿಸುತಲರಿಸೇನೆಗೆರಗಿದನಾಗಳ್ ||
ಘೋರಕದನಕೈಗಟ್ಟಲ್ |
ವೀರಕುಮಾರನಿವಗೆಂದ ಗರ್ಜಿಸುತಾಗಂ || 118 ||

**ಭೈರವಿ - ಏಕ**

ಅರರೇ ಮಾಳವ ಕೀಟ | ಘನ |
ತರವೇ ಕಿಚ್ಚಿನೊಳಾಟ ||
ಅರಿಯದೆ ಕೆಣಕಿದೆ ಮರುಳ | ಮದ |
ಗರುವದಿ ಕೆಟ್ಟೆಯೊದುರುಳ || 119 ||
ನಿಲ್ಲಿಸು ಹೊಲ್ಲದ ಮಾತ | ಬಾ |
ಸೊಲ್ಲಡಗಿಪೆ ನೃಪಜಾತ ||
ಬಲ್ಲೆನು ಕಿಚ್ಚಿಗೆ ಮದ್ದ | ನೀ |
ನೊಲ್ಲೆಂದರು ಬಿಡೆ ಸಿದ್ಧ || 120 ||
ಅರಿತೆನು ಶೌರ್ಯವನಿಂದು | ಚೋ |
ರರ ತೆರದಲಿ ನೀ ಬಂದು ||
ಮರೆಯಲಿ ಭಾವನ ಕೊಂದೆ | ಇದು |
ತರವೇ ಭೂಪರ ಪಂದೆ || 121 ||
ನೀತಿಯ ಮೀರದೆ ರಣದಿ | ನಾ |
ನಾತನ ಕೊಂದಿಹೆ ಕಣದಿ ||
ಖಾತಿಯು ಬೇಡೆಲೊ ತರಳ | ನೀ |
ಮಾತನು ಕೇಳೆಲೊ ಮರುಳ || 122 ||

ತಂಗಿಯ ಸೆರೆಯೊಳಗಿಟ್ಟೆ | ಇದ |
ರಿಂಗಿತವರಿಯದೆ ಕೆಟ್ಟೆ ||
ಭಂಗಿಪೆ ನಿನ್ನಯ ಹಮ್ಮ | ರಣ |
ರಂಗದಿ ನೋಡೈ ನಮ್ಮ || 123 ||
ಸೊಕ್ಕಿನ ಹುಡುಗಿಯ ಕಂಡು | ನಾ |
ನಿಕ್ಕಿದೆ ಬಂಧದೊಳಂದು ||
ದಕ್ಕಳು ತಂಗಿಯು ನಿನಗೆ | ಬಿಡು |
ಲೆಖ್ಖವೆ ನೀಧುರಕೆನಗೆ || 124 ||

**ಭಾಮಿನಿ**

ಶರದ ಮಳೆಯನು ದೇವಗುಪ್ತನು |
ಕರೆದು ಮುಚ್ಚಿದ ತರಳನಂಗವ |
ನರನಿಮಿಷ ಮೈಮರೆದು ನೃಪಸುತನೆದ್ದನೇನೆಂಬೆ ||
ಭರದಿ ಚಾಪವ ತುಡುಕಿ ಕಣೆಗಳ |
ಸುರಿಯಲಾಕ್ಷಣ ದೇವಗುಪ್ತನ |
ಶಿರವ ಹಾರಿಸಿತೊಂದು ಕೂರ್ಗಣೆ ನಭಕೆ ವೇಗದಲಿ || 125 ||

**ಸೌರಾಷ್ಟ್ರ - ತ್ರಿವುಡೆ**

ದೊರೆಯ ಸಾವನು ಕಂಡು ಮಂತ್ರಿಯು |
ಧುರದಿ ದಣಿವೇಕೆಂದು ಕುವರನ |
ಚರಣ ಪಿಡಿಯುತಲೆಂದ ವೀರನೆ | ಮರೆಯುತಿದನು || 126 ||
ಮನ್ನಿಸೆಮ್ಮಯ ತಪ್ಪ ದಯದೊಳು |
ನಿನ್ನ ಸೇವಕರಾವು ಪಾಲಿಸು |
ಮುನ್ನ ನಂಬಿದೆ ಪಾದಕಮಲವ | ನೆನ್ನ ಸಲಹೊ || 127 ||
ಎನುವ ಶಶಿಗುಪ್ತನನು ಧರಣಿಪ |
ತನಯ ಸಂತವಿಸಿದನು ಮರುಕದಿ |
ಮನದಿ ಸಂಶಯ ಬೇಡ ಪಾಲಿಪೆ | ನೆನಲು ಕೇಳಿ || 128 ||
ಅರಸಗುವರನೆ ನಮ್ಮ ನಗರಕೆ |
ತೆರಳಿ ತಂಗಿಯ ಬಂಧ ಬಿಡಿಸುತ |
ಸರಸದಿಂದಲೆ ನಮ್ಮನೆಲ್ಲರ | ಪೊರೆವುದಿಂದು || 129 ||
ಆಗಲೆನ್ನುತ ರಾಜ್ಯವರ್ಧನ |
ಬೇಗ ಬಂದಪೆನೆನುತ ಸೈನ್ಯವ |
ಬಾಗಿಲೊಳು ಬಿಟ್ಟೊಂಟಿಯಾಗುತ | ಸಾಗಲಂದು || 130 ||
ಕಪಟಿ ಮಂತ್ರಿಯು ತಿಳಿದ ತನ್ನೊಳು |
ನೃಪನ ಕೊಂದಿಹ ಸೇಡ ತೀರ್ಚಿಪೆ |
ವಿಪುಳ ಸೈನ್ಯವ ಬಿಟ್ಟು ಬಂದಿಹ | ನೃಪನ ಕುವರ || 131 ||
ಆತನರಿಯದ ತೆರದಿ ಖಡ್ಗವ |
ಪಾತಕಿಯು ಸೆಳೆಯುತ್ತ ಹೊಯ್ದನು |
ಘಾತವಾಯ್ತಿಳೆಗೊರಗಿದನು ನೃಪ | ಜಾತ ಮಡಿದು || 132 ||
ಅಳಿಯಲಾತನು ಹಿಗ್ಗಿ ಸಚಿವನು |
ಬಳಿಕ ಸೇನೆಯ ಕೊಚ್ಚಿ ಕೊಲುತಿರ |
ಲುಳಿದ ಚಾರಕನೋರ್ವ ಹರ್ಷನ | ಬಳಿಗೆ ಬಂದ || 133 ||

**ಕಂದ**

ಅಣ್ಣನಳಿದುದನರಿತು ನೃಪ |
ಚಿಣ್ಣ ಚರಮುಖದಿ ಮರುಗಿದ ಕಲ್ಮರ ಕರಗಲ್ ||
ಕಣ್ಣನಿಯೊಳಾಳಿದ ತನು |
ಬಣ್ಣ ಸೊರಗಿ ವಸನ ಕೇಶಗಳ್ಮಲಿನಗೊಳಲ್ || 134 ||

**ಸಾವೇರಿ - ಆದಿ**
**(ಕರ್ಣಾರ್ಜುನ ಕಾಳಗದ ಹರಿಯೇ ನೀ ಲಾಲಿಸಯ್ಯಾ || ಎಂಬಂತೆ )**
ಅಣ್ಣಾ ನೀ ಪೋದೆಯೇನೈ | ನಗುವ ಮೊಗವ |
ನಿನ್ನು ನಾ ಕಾಣೆನೇನೈ ||
ಸಣ್ಣವನೆನ್ನ ತೊರೆದು | ತೆರಳಬಹುದೆ |
ಮುನ್ನ ತಂಗಿಯ ಮರೆದು || 135 ||
ತಂದೆಯಗಲಿದ ನಮಗೆ | ಅಣ್ಣಾ ನೀನೆ |
ತಂದೆ ಎನುತ ಮನಸಿಗೆ ||
ತಂದು ದುಃಖವ ಸಹಿಸಿ | ಕೊಂಡನಮ್ಮ |
ನಿಂದು ತೊರೆದರೆ ಮರೆಸಿ || 136 ||
ಮಾತೆ ಪೇಳಿರ್ದಳಂದು | ನಿರ್ಮಲ ಮನದೊ |
ಳಾತನನು ಸೇವಿಸೆಂದು ||
ಪ್ರೀತಿಯಾಗದೆ ಹೋಯ್ತು | ಎನ್ನ ಸೇವೆ |
ಈ ತೆರದೊಳಂತ್ಯವಾಯ್ತು || 137 ||
ಅಡವೀಗೆ ಪೊರಟಂದು | ಬೇಡವೆನುತ |
ತಡೆದೆನು ಕರಪಿಡಿದು ||
ಕಡುಕಪಟ ಬಿಡದಿಯ | ಪೊಕ್ಕು ನೀನು |
ದಡಿಗರೊಳು ಮಡಿದೆಯ || 138 ||

**ಭಾಮಿನಿ**
ತಿಳಿದು ಮಂತ್ರಿಯು ನುಡಿದ ನೀತಿಯ |
ನಳಲಿ ಫಲವೇನಿನ್ನು ತಪ್ಪದು |
ನಳಿನಜಾತನ ಬರಹ ಸೂತ್ರದ ಬೊಂಬೆಗಳು ನರರು ||
ಲಲನೆಯನು ಸೆರೆ ಬಿಡಿಸಲೆತ್ನಿಸು |
ತಿಳಿಯೆ ಕರ್ತವ್ಯವದು ಕುವರನೆ |
ಅಳಿದವಂಗಂತ್ಯವಿಧಿಗಳ ನಿರ್ವಹಿಸು ರೂಢಿಯಲಿ || 139 ||

**ಮಾರವಿ - ಏಕ**
ತಂಗಿಯ ಪೆಸರನು ಕೇಳಲು ದುಃಖವ |
ದಿಂಗಿತು ಹರ್ಷನಿಗೆ ||
ಸಂಗರ ಶೂರನು ಪೇಳಿದ ಕೋಪದೊ |
ಳಂಗಜ ವೈರಿಯೊಲು || 140 ||
ಖೂಳನ ರಕ್ತದೊಳಣ್ಣಗೆ ತರ್ಪಣ |
ನಾಳೆಯೊಳೀಯುವೆನು ||
ಜಾಳಿಪೆ ಚಿತೆಧೂಮದೊಳಾತನ ಸತಿ |
ಯಾಳಿಯ ಕಂಗಳನು || 141 ||
ಕಪಟದ ಫಲವನು ತೋರುವೆನೆನ್ನುತ |
ರಿಪುಗಳ ಮರ್ದನಕೆ ||
ವಿಪುಳದಿ ಸೈನ್ಯವ ಕೂಡುತ ಬಂದನು |
ನೃಪಸುತ ಮಾಳವಕೆ || 142 ||
ಕಳವಳಗೊಳ್ಳುತ ಶಶಿಗುಪ್ತನು ರಿಪು |
ಗಳ ನೋಡಿದನಂದು ||
ಬಲರಿಪು ಬಂದನೊ ದಾನವಸೂದನ |
ವಿಲಯದ ಶಂಕನೊ || 143 ||
ಆಟಕೆ ಬಂದಿಹ ಕಾಳಿಯೊ ಕಾಲನು |
ಬೇಟೆಗೆ ಬಂದಿಹನೊ ||
ನೋಟಕೆ ನಿಲುಕದ ಕಟಕವು ಗಜಹಯ |
ಕೂಟವು ಭೀಕರವು || 144 ||

ಗಿರಿಗಳು ನಡೆಯುತ ಬಂದವೊ ಮುಗಿಲೇ |
ಧರಣಿಗೆ ಜಾರಿದುದೊ ||
ಶರಧಿಯೆ ತುಳುಕಿತೊ ವಡಬಾಗ್ನಿಯೆ ಬಲು |
ಮೊರೆಯುತ ಸಾರಿದುದೊ || 145 ||

**ವಾರ್ಧಕ**
ಜೀವಭಯದಿಂದ ಶಶಿಗುಪ್ತನುರೆ ಕಂಪಿಸುತ |
ಲಾವನೀ ಸೈನ್ಯದೊಳುಕಾದಿ ಗೆಲುವವನಿಂದು |
ಸಾವು ತಪ್ಪಿಸೆ ಪುರವ ಬಿಟ್ಟೋಡುವುದೆ ಲೇಸೆನುತ ಗುಪ್ತಮಾರ್ಗದಿಂದ ||
ತೀವಿದಡವಿಯನು ಸೇರಿದನಿತ್ತ ಪಟ್ಟಣದಿ |
ಕಾವಭಟರೋಡುತಿರೆ ಸೆಣಸುವರು ಕಾಣದಿರ |
ಲಾ ವಸುಮತೀಂದ್ರಸುತ ಸೋದರಿಯ ಸೆರೆಮನೆಯನರಸುತ್ತ ಬಂದನಾಗ || 146 ||

**ಕಂದ**
ಕಾರಾಗಾರವು ಶೂನ್ಯಂ |
ವೀರಾಂಗನೆಯಾದ ರಾಜ್ಯಶ್ರೀಯಳ ಕುರುಹಂ ||
ಧೀರಾಕಾರನು ಕಾಣದೆ |
ಭೂರಿ ದುಗುಡದಿಂ ಸುರಥನ ಕರೆದಿಂತೆಂದಂ || 147 ||

**ಕೇದಾರಗೌಳ - ಅಷ್ಟ**
ಸೆರೆಯಲ್ಲಿ ತಂಗಿಯ ಕುರುಹನ್ನು ಕಾಣೆನು |
ಬರಿದಾಯ್ತು ಯತ್ನಗಳು ||
ಪುರದಲ್ಲಿ ಕೇಳ್ದರೆ ಸುಳಿವನ್ನು ಪೇಳುವ |
ನರರಿಲ್ಲವಿಂದಿನೊಳು || 148 ||
ಪತಿಯನ್ನು ಪಾಪಿಯು ಮಡುಹಲು ಬಾಲೆಯು |
ವ್ಯಥಿಸುತ ವೈಧವ್ಯಕೆ ||
ಧೃತಿಗೆಟ್ಟು ಜೀವವ ತೊರೆದಳೊ ಶಿವಶಿವ |
ಗತಿ ಮುಂದೆ ಏನಿದಕೆ || 149 ||
ಏನಾದರಾಗಲಿ ಸುರಥ ನೀನರಸುತ್ತ |
ಕಾಣಿಸು ಗುರುತೆನ್ನಲು ||
ಮಾನವಾಧಿಪ ಸುತಗೆರಗುತ್ತ ನಡೆದನು |
ಜಾಣ ಭಟರ ಸಂಗಡ || 150 ||
ಸುರಥನು ಪೋಗಲರಸುವೆ ತಾನೆನ್ನುತ |
ವರವಿಂಧ್ಯ ಕಾನನದಿ ||
ಚರಿಸುತ್ತ ನೃಪಸೂನು ಬರಲು ಗೋಚರಿಸಿತು |
ವರಪರ್ಣದಾಲಯವು || 151 ||
ಘನವೆತ್ತ ಹರ್ಷನು ಬರಲಂದು ತವಕದಿ |
ಮುನಿಯ ಕಾಣುವೆನೆನ್ನುತ ||
ವಿನಯದಿ ಬಾಗಿಲ ಬಳಿನಿಂದ ಕುವರನ |
ಮುನಿವರ ಕರೆದೆಂದನು || 152 ||
ಬಾರಯ್ಯ ಕುಳ್ಳಿರು ಯಾವ ದೇಶವು ನಿನಗೆ |
ವೀರ ನೀನಾರುಸುರು ||
ಯಾರಯ್ಯ ಪೆತ್ತಿಹ ಪುಣ್ಯವಂತರು ಪೇ |
ಳಾರ ವಂಶೋದ್ಭವರು || 153 ||
ದೇಶಪಾಲನ ಸುತನಂತೆ ಕಾಣುತಲಿಹೆ |
ವೇಷಭೂಷಣಗಳಿಂದ ||
ದೇಶ ಬಿಟ್ಟಿಲ್ಲಿಗೆ ಬಂದ ಕಾರಣವೇನು |
ಬೇಸರಿಸದೆ ಪೇಳೆಂದ || 154 ||

**ಯಮುನಾ ಕಲ್ಯಾಣಿ - ತ್ರಿವುಡೆ**
ಲಾಲಿಸೈ ಮುನಿವೃಂದ ಮೌಳಿಯೆ |
ಪೇಳ್ವೆನೆನ್ನೀ ಕಥೆಯನು ||
ದಾಳಿಗೈದಂತಕನ ತೌಳಿಯು |
ಮೇಳವಿಸಿದೀ ವ್ಯಥೆಯನು || 155 ||
ತಂದೆ ತಾಯ್ಗಳ ಮತ್ತೆ ಭಾವನ |
ಬಂಧುವೋರ್ವನ ಮರಣದಿ ||
ಕುಂದಿ ಹೋಯಿತು ಬಾಳ ಶ್ರದ್ಧೆಯು |
ಬೆಂದೆನಂತಃಕರಣದಿ || 156 ||
ದುರುಳ ದೊರೆ ತಾನೆನ್ನ ತಂಗಿಯ |
ಸೆರೆಯೊಳಿಟ್ಟುದ ಕೇಳಿದೆ |
ಕೆರಳಿ ಸೇನೆಯ ಕೊಂಡು ನಾ ಬರೆ |
ಪುರದ ಶೂನ್ಯವ ನೋಡಿದೆ || 157 ||
ಅರಸಿ ತಂಗಿಯ ಕಾಡು ಮೇಡೊಳು |
ಬರಿದೆ ಭಂಗವನುಂಡೆನು |
ಕುರುಹುದೋರೈ ತವಸಿ ಪುಂಗವ |
ಚರಣದಾಶ್ರಯಗೊಂಡೆನು || 158 ||

**ಭಾಮಿನಿ**
ಆಲಿಸುತ ಖಗಮಿತ್ರ ಋಷಿಪತಿ |
ತಾಳಿ ಮರುಕವ ಪೇಳ್ದನಾತಗೆ |
ಕೇಳರಿಯೆ ನಾ ರಾಜ್ಯ ಶಿರಿಯಳ ವಾರ್ತೆಯೆನುತಿರಲು ||
ಬಾಲವಟು ತಾ ಬಂದುಸಿರಿದನು |
ಬಾಲೆಯೋರ್ವಳು ಕಾಡೊಳಗ್ನಿ |
ಜ್ವಾಲೆಯನು ಪೊಗಲಿರುವಳೆಂದನು ಭೀತಿ ಕಾತರದಿ || 159 ||

**ಕಂದ**
ಎಂದುದ ಕೇಳುತ ಸಂಶಯ |
ದಿಂದ ಹರುಷ ವಟುಮುನೀಂದ್ರು ಸಹಿತಲೆ ಜವದಿಂ ||
ಬಂದಾ ಜ್ವಾಲೆಯ ಸನಿಯದಿ |
ಕಂಡನು ಬಳಲಿ ಬಸವಳಿದು ಕುಂದಿದನುಜೆಯಂ || 160 ||

**ಸಾಂಗತ್ಯ - ರೂಪಕ**
ಹರುಷನ ಕಾಣುತ್ತ ದುಃಖವಿಮ್ಮಡಿಸಲು |
ತರಳೆಯು ಪಾದದಿ ಬಿದ್ದು ||
ಹೊರಳಿ ಶೋಕಿಸೆ ತಂದೆ ತಾಯ್ಗಳನೆಣಿಸುತ್ತ |
ಪರಸುತ್ತ ಶಿರವೆತ್ತಿ ನುಡಿದ || 161 ||
ಅಳದಿರು ಮಡಿದವರ್ಮಗುಳೆ ಬಾರರು ನಾವು |
ಗಳಿಸಿದ ಕರ್ಮಗಳಿಂತು ||
ಲಲನೆ ನೀನೇತಕಗ್ನಿಯ ಬಲಗೊಳುವೆಯೆ |
ನಲು ಪೇಳಿದಳು ದುಃಖಭರದಿ || 162 ||
ದುರುಳ ದೇವಗುಪಿತ ಪತಿಯನ್ನು ಕೊಂದೆನ್ನ |
ಸೆರೆಯೊಳಿಟ್ಟನದ ನೀ ಬಲ್ಲೆ ||
ಧುರದಲ್ಲಿ ದೇವಗುಪ್ತನ ಜೊತೆ ಸೆಣೆಸುತ |
ಶಿರತುಂಡುಗೈದನೆಂಬುದನು || 163 ||
ಕೇಳುತ್ತ ಭಯದಿಂದ ನಾನಿರ್ದ ಸೆರೆಮನೆ |
ಪಾಲಕರೋಡಲು ಜವದಿ ||
ವೇಳೆಯ ನಾನರಿದೋಡುತ್ತ ಸಖಿಯರ |
ಮೇಳದಿಂದಡವಿಯ ಸೇರ್ದೆ || 164 ||

ಬರಿದಾಯ್ತು ಬಾಳಿಂದು ಬದುಕಲಾರೆನು ಮುಂದೆ |
ಎರೆಯನ ಸೇರಲೆಂದೀಗ ||
ವಿರಚಿಸಿ ನಾನಗ್ನಿಕೊಂಡದೊಳೀ ತನು |
ತೊರೆವೆನೆನಲು ಹರ್ಷ ಪೇಳ್ದ || 165 ||

**ಮಧುಮಾಧವಿ - ತ್ರಿವುಡೆ**

ಹರಹರಾ ಪಿತನಳಿಯೆ ಮಾತೆಯು |
ತೊರೆದಳೀತೆರ ತನ್ನ ಕಾಯವ |
ನರರೆ ನೋಡಿದ ಪಾಪಿಕಂಗಳು |
ಕುರುಡುಗೊಳ್ಳದೆ ಪೋದವೆ || 166 ||
ಬಳಿಕ ಭಾವನು ಮಡಿಯಲಗ್ರಜ |
ಖಳರ ಕಪಟಕೆ ತನುವ ತೆರಲೀ |
ಗುಳಿದುಕೊಂಡಿಹರೀರ್ವರೊಳು ನೀ |
ನಳಿದರೆನ್ನಯ ಭಾಗ್ಯಕೆ || 167 ||
ಅವನಿಯಲಿ ಜೋಡಿಲ್ಲ ಪಾಪಿಯ |
ಭವದ ಬವಣೆಗೆ ಕಲಶವಿಕ್ಕಲು |
ಹವಣಿಸಿದೆ ನೀನೆನುತ ಮರುಗಿದ |
ನವನಿಪಾಲಕುಮಾರನು || 168 ||
ನಿನ್ನ ಬಿಡಿಸಲು ಪೋಗಿ ಮೋಸದೊ |
ಳಣ್ಣ ಮಡಿದನು ಬಳಿಕ ನಾ ಬರೆ |
ಚೆನ್ನೆ ನೀ ಕಾಣದಿರೆ ಕಾಡೊಳ |
ಗೆನ್ನ ಪುಣ್ಯದಿ ದೊರಕಿದೆ || 169 ||
ಮುನ್ನ ಮಾಡಿದ ಕರ್ಮ ಸಂಚಿತ |
ಬೆನ್ನ ಬಿಡದೀ ತನುವ ಸುಟ್ಟರು |
ಇನ್ನು ಕೇಳ್ ನೀ ಹರಿಯ ಧ್ಯಾನದಿ |
ಕನ್ಯ ಕುಬ್ಜದೊಳಿರ್ಪುದು || 170 ||

**ಭಾಮಿನಿ**

ಹರುಷನಿಂತೆನೆ ಪೇಳ್ವನಾಯತಿ |
ವರನು ಸೈರಿಸು ಮಗಳೆ ದುಃಖವ |
ಮರುಗದಿರು ನೀನಣ್ಣನೊಂದಿಗೆ ತೆರಳು ಪುರಕೆನಲು ||
ತರಳೆಯೊಪ್ಪುತ ಬೀಳ್ಕೊಳುತಲಾ |
ಹರುಷನೊಂದಿಗೆ ನಗರಕೈತರೆ |
ಸುರಥನಿತ್ತಲು ಸುದತಿಯಳನರಸುತ್ತ ವನವನದಿ || 171 ||

**ಕಾಂಬೋಧಿ - ಝಂಪೆ**

ಪ್ರಾಣದಾಸೆಯೊಳಂದು ಶಶಿಗುಪ್ತ ಸೇರಿರ್ದ |
ಕಾನನದಿ ಸುರಥನೀ ತೆರದಿ ||
ಮಾನಿನಿಯನರಸುತ್ತ ಬರುತಲಿರೆ ದೂರದೊಳು |
ಕಂಡನಾ ಶಶಿಗುಪ್ತನಿವರ || 172 ||
ಹರಹರಾ ತನ್ನನಿವರರಸುತ್ತ ಬಂದಿಹರು |
ಬರಿದೆ ಕೈಯೊಳು ಸಿಲುಕಲೆನ್ನ ||
ಪರಿಪರಿಯ ಹಿಂಸೆಯನು ಗೈಯುತ್ತ ಕೊಲ್ಲುವರು |
ಶರಣು ಹೋದರೆ ಪೊರೆಯರೆನ್ನ || 173 ||
ಮರಣವೆಂತಾದರೆನಗಿಂದು ನಿಶ್ಚಯವಾಯ್ತು |
ಧುರದಿ ಸೆಣಸುವುದೊಂದೆ ಮಾರ್ಗ ||
ಬರುತಿಹರು ಬಳಿಗೆಂದು ಧನು ಶರವ ಪಿಡಿಯುತ್ತ |
ಭರದಿ ಝೇಂಕರಿಸಲಿಳೆ ಮೊಳಗೆ || 174 ||

ಕೇಳಿದಾಕ್ಷಣ ಸುರಥನಾಶ್ಚರ್ಯಗೊಳುತೆಂದ |
ಕೇಳಿದಿರೆ ಚಾಪ ಝಂಕಾರ ||
ಖೂಳನಾರೀ ತೆರದಿ ಮೆರೆಯುತಿಹ ಪರಿಕಿಸಲು |
ಕಾಳಗದ ಕೊಬ್ಬೇರಿ ಕೆಟ್ಟ || 175 ||
ದಾನವನೊ ತಸ್ಕರನೊ ಶಬರರಿಗೆ ಪಾಲಕನೊ |
ಮಾನವನೊ ಮೇಣ್ಮರುಳನಿವನೊ ||
ಕಾಣಿಸುವೆ ಸಂಗರದಿ ಶೈಮಿನಿಯ ಸೌಖ್ಯಗಳ |
ಕಾನನದ ಮೃಗಕಿಕ್ಕಿ ಬಲಿಯ || 176 ||
ಎನುತ ಚಾಪವ ತುಡುಕಿ ಸುರಥನಾ ಮಂತ್ರಿಯನು |
ವನಮಧ್ಯೆ ಕಾಣುತಿಂತೆಂದ ||
ರಣತೀಟೆಯಿಂದೆನ್ನ ಕೆಣಕಿದುದು ಮಾರ್ಗದೊಳು |
ಫಣಿಗೆಡವಿದಂತಾಯ್ತು ಮರುಳೆ || 177 ||
ಕಾಲನೂರಿನ ಕರೆಯ ಹೊತ್ತಿರುವೆ ಚಾಪ ಶರ |
ದಾಳಿಯನು ಕರದೊಳಗೆ ಪಿಡಿದು ||
ಕಾಳಗಕೆ ಮನಮಾಡಿ ಸಾಯದಿರೆಲವೊ ಖೂಳ |
ಪೇಳು ನೀನಾರೆಂಬುದೀಗ || 178 ||
ಬಗುಳದಿರು ಬಲ್ಲೆ ರಣಮಲ್ಲ ನೀನೆಂಬುದನು |
ವಿಗಡ ಮಂತ್ರಿಯ ಬಲ್ಲೆಯೇನೊ ||
ಸೊಗಸಾಯ್ತು ಮಾಳವದ ಶಶಿಗುಪ್ತನಳುಕುವನೆ |
ಜಗಳದಲಿ ನೋಡೆನ್ನ ಪರಿಯ || 179 ||
ಭಳಿರೆ ನಾವರಸುತಿಹ ಬಳ್ಳಿ ತಾ ಪಾದದೊಳು |
ಸಿಲುಕಿದಂತಾಯ್ತು ನೀನೆಮಗೆ ||
ಅಳುಕಿ ಸಂಗರಕಂದು ಕಾನನವ ಸೇರಿದರೆ |
ಸುಲಭವಾಯಿತೆ ಕಪಟಕೃತ್ಯ || 180 ||
ನಾಲಿಗೆಯ ಸೀಳುವೆನು ಕಾಕು ನುಡಿಯಾಡಿದರೆ |
ಖೂಳ ಸುರಥನೆ ಶೌರ್ಯವಿರಲು ||
ತಾಳದಿರು ನಿರ್ಣೈಸುವೆನು ಕಪಟಿಯಾರೆನುತ |
ಕಾಳಗದ ಕೊನೆಯಲ್ಲಿ ನೋಡು || 181 ||
ಅರಸನಂದನನ ಕೊಂದಿಹ ಪಾಪವಿಂದಿರದೆ |
ಕರೆಸಿಹುದು ನಿನ್ನನೀ ತೆರದಿ ||
ಮರುಳೆ ನೀನಿದನರಿಯದಾದೆಲವೊ ಚಾರಿನ್ನು |
ಧುರಕೆನುತಲನುವಾದನಾಗ || 182 ||

**ಸೌರಾಷ್ಟ್ರ - ತ್ರಿವುಡೆ**

ಧುರದೊಳಸ್ತ್ರಗಳೆಲ್ಲ ತೀರಲು |
ಸುರಥ ಖಡ್ಗವ ಕೊಂಡು ಮಂತ್ರಿಯ |
ಶಿರದ ಕೇಶವ ಪಿಡಿದು ಗರ್ಜಿಸು | ತಿರದೆ ಪೇಳ್ದ || 183 ||
ಇಳೆಗೆ ಭಾರವೊ ಪಾಪಿ ಸಚಿವನೆ |
ಉಳಿಸೆ ನಿನ್ನನು ದೋಷವೀಗಲೆ |
ಕಳಿಪೆ ಕಾಲನ ಮುಂದೆ ಕಪಟವ | ಬಳಸಿ ನೋಡು || 184 ||
ಮೋಸವಿದ್ಯೆಯ ಪೇಳ್ದ ತವಗುರು |
ವೇಸು ಧನ್ಯನೊ ಶಿಷ್ಯನೀತೆರ |
ಘಾಸಿಯಾಗುತ ಮಂಡೆ ತಗ್ಗಿಸಿ | ದಾಸಿಯಂತೆ || 185 ||
ಕಾಯುವರ ಕಾಣದೆ ವನಮೃಗ ನಿ |
ಕಾಯಕೆ ತನುವನೀಯುವ ಸಚಿವ |
ರಾಯಗರುಹೈ ಗುರುವೆ ಮೋಸದು | ಪಾಯವನ್ನು || 186 ||
ಜರೆದು ನಾನಾ ವಿಧದಿ ಮಂತ್ರಿಯ |
ಶಿರವ ಛೇದಿಸೆ ರಕ್ತ ಚಿಮ್ಮಿತು |
ಹರುಷ ಮಾಡಿದ ಭಾಷೆ ಸಂದಿತು | ಸುರಥನಿಂದ || 187 ||

**ಭಾಮಿನಿ**
ವನದಿ ಮಂತ್ರಿಯ ಮಡುಹಿ ಸುರಥನು |
ವನಿತೆಯಳ ಕಾಣದಿರೆ ಕುಂದುತ |
ಮನದಿ ಚಿಂತಿಸಿ ಬರಿದೆ ಕಾಲವ ಕಳೆಯಲೇಕೆನುತ ||
ಇನಿತು ವಾರ್ತೆಯನೆಲ್ಲ ಪೇಳ್ವೆನು |
ಜನಪಸುತಗೆಂದೆನುತ ಸೈನಿಕ |
ರನಿಬರೊಂದಿಗೆ ಪುರವ ಸಾರಿದನನಿಲವೇಗದಲಿ || 188 ||
ಸುರಥ ನಸುನಾಚುತ್ತಲೊಂದಿಸಿ |
ಹರುಷಗೆಲ್ಲವನೊರೆಯಲಾನೃಪ |
ತರಳನೆಂದನು ಭಳಿರೆ ಮೆಚ್ಚಿದೆ ನಿನ್ನ ಸಾಹಸಕೆ ||
ಬರಿದೆ ಚಿಂತಿಸಬೇಡ ತಂಗಿಯ |
ಕರೆದು ತಂದಿಹೆನೆನಲು ಸಂತಸ |
ಭರದಿ ಸರ್ವರು ಹರಿಯ ಕಾರುಣ್ಯವನು ಕೊಂಡಾಡೆ || 189 ||

**ಕೇದಾರಗೌಳ - ಝಂಪೆ**
ಕಂತು ಜನಕನ ಕರುಣದಿ | ಹರ್ಷನಿರ |
ಲಿಂತು ಶಕ್ರನ ವಿಭವದಿ ||
ಮಂತ್ರಿ ಸಾಮಂತರುಗಳು | ಸುಖದೊಳಿರೆ |
ಚಿಂತೆವರ್ಜಿತ ಜನಗಳು || 190 ||
ಸುರರ ನಾಚಿಪ ಸಭೆಯೊಳು | ಪೇಳಿದನು |
ಹರುಷ ಮಂತ್ರಿಗೆ ಮುದದೊಳು ||
ಒರೆವೆ ಕೇಳೆನ್ನ ಮನವ | ವಿಸ್ತರಿಸೆ |
ಪರಮಕ್ಷತ್ರಿಯರ ಘನವ || 191 ||
ನೆರೆಯೊಳಿಹ ಕಾಮರೂಪ | ರಾಜ್ಯದೊಳು |
ಭರಿತ ಶೂರನಹ ಭೂಪ ||
ಇರುವ ಪರಿ ನಾ ಕೇಳ್ದೆನು | ಸಾಹಸವ |
ಒರೆ ಹಚ್ಚಿ ಮನ ತಾಳ್ದೆನು || 192 ||
ಸಂಧಿ ಸಂಗ್ರಾಮವೆರಡು | ಯುಕ್ತಿಯಲಿ |
ಹೊಂದಿಸುವ ನೃಪನ ಸೊಗಡು ||
ಕುಂದಿದೆಮ್ಮಯ ಕೀರ್ತಿಯ | ಬೆಳಗಿಸುವ |
ಚೆಂದದಿಂದಲೆ ನೀತಿಯ || 193 ||

**ಸೌರಾಷ್ಟ್ರ - ತ್ರಿವುಡೆ**
ಎನುತಲಪ್ಪಣೆಯಿತ್ತು ಸುರಥಗೆ |
ಧನುಶರಾಳಿಯ ವಿವಿಧ ಕೈದುವ |
ರಣದ ಸನ್ನಹವೆಲ್ಲ ನೆರಹಿದ | ಜನಪಕುವರ || 194 ||
ಗಜರಥಾಶ್ವಪದಾತಿಗಳು ದಿ |
ಗ್ಗಜವೆ ತೊನೆಯುವ ತೆರದಿ ಕಾಲಿಡ |
ಲಜಭವಾಂಡವು ನಡುಗೆ ಕೂರ್ಮನು | ಗಜಬಜಿಸಲು || 195 ||
ಸನ್ನುತ ಸುಮತಿ ಸುರಥರೊಂದಿಗೆ |
ಸ್ವರ್ಣನಿರ್ಮಿತ ರಥವನೇರಿ ಸು |
ಪರ್ಣರೂಢನ ನೆನೆದು ರೂಢಿಪ | ಚಿಣ್ಣ ನಡೆದ || 196 ||

**ಪಂಚಾಗತಿ - ಮಟ್ಟೆ**
ದಂಡು ನಡೆದುದು | ಕೆಣಕಿದಧಟರ |
ತುಂಡುಗೈವುತ | ದಂಡು ನಡೆದುದು || 197 ||
ಹಲವು ರಾಜರು | ಸುರಥನೊಂದಿಗೆ |
ಕಲಹಗೈವುತ | ಹೊಲಬುಗೆಟ್ಟರು || 198 ||

ಹರುಷವರ್ಧನ | ಕಪ್ಪಗೊಳ್ಳುತ |
ಭರದಿ ಬಂದನು | ಕಾಮರೂಪಕೆ || 199 ||
ಪುರದ ಪಾಲರು | ಕಾಣುತಿವರನು |
ಹುರುಪುಗೊಂಡರು | ತಡೆದು ನಿಂದರು || 200 ||
ಸುರಥ ವಹಿಲದಿ | ತಡೆದ ಚಾರರ |
ಕರವ ಬಂಧಿಸಿ | ನೂಕಲಾಕ್ಷಣ || 201 ||

**ಕಂದ**

ಗೋಳಿಡುತಲಾ ಚರರು ಭೂ |
ಪಾಲಕ ಜಯಸೇನನೋಲಗಕೆ ಬರಲಾಗಂ ||
ತಾಳಿರಭಯಮೇನಾದುದು |
ಪೇಳಿರಿದೇನೆನಲು ನೃಪತಿಚರರಿಂತೆಂದರ್ || 202 ||

**ಪಂತುವರಾಳಿ - ಮಟ್ಟೆ**

ಕೇಳು ಕಾಮರೂಪ ಧರಣಿಪ | ನಮ್ಮನೆಲ್ಲ |
ಗೋಳುಹುಯ್ದು ಬೆನ್ನು ಮುರಿದಿಪ ||ಪ||
ದೊಡ್ಡದೊಂದು ಸೇನೆಯೊಂದಿಗೆ | ಸಣ್ಣ ಹುಡುಗ |
ದಡ್ಡತನದಿ ಬಂದನಿಲ್ಲಿಗೆ ||
ಗೊಡ್ಡು ಮಾತನಾಡಿ ನಮ್ಮನು | ಕೆಣಕಲಾವು |
ಸಡ್ಡೆ ಮಾಡಲಿಲ್ಲವವರನು || 203 ||
ಏಟುಗೀಟು ಬಿದ್ದುದವರಿಗೆ | ನೋವು ನಮಗೆ |
ಸಾಟಿಯಿಲ್ಲ ಸಣ್ಣ ಹುಡುಗಗೆ ||
ನೋಟಕೆನಿತು ಚೆಲ್ವನಾತನು | ಅಂತೆ ಕದನ |
ದಾಟದಲ್ಲಿ ಬಹಳ ಚತುರನು || 204 ||
ಹರುಷವರ್ಮನಂತೆ ಪೋರನು | ಥಾಣೇಶ್ವರ |
ಕರಸನಂತೆ ಜೊತೆಗೆ ಸುರಥನು ||
ಧುರದ ಹಂಬಲಿಂದ ಬಂದಿಹ | ಆನೆ ತೇರು |
ತುರಗ ಮಂದಿಯೆಲ್ಲ ತಂದಿಹ || 205 ||
ಮತ್ತೆ ಪೇಳ್ವರೊಂದು ಮಾತಿಗೆ | ನಿಮಗೆ ಅನ್ನ |
ವಿತ್ತ ಧಣಿಯು ಬರಲಿ ಸಮರಕೆ ||
ಸತ್ವವಿಲ್ಲದಿರಲು ಕಪ್ಪವ | ನರಸುಕುವರ |
ಗಿತ್ತು ಕಟ್ಟಿಕೊಳಲಿ ಪಾದವ || 206 ||

**ಭಾಮಿನಿ**

ಕೇಳಿ ಕಲಿ ಜಯಸೇನ ಕೆಣಕಿದ |
ಕಾಲನಂದದಿ ಕೈಯಲಿಹ ಕರ |
ವಾಲವನು ಝಳಪಿಸುತ ಗರ್ಜಿಸಿ ನುಡಿದ ಕೋಪದಲಿ ||
ಭಾಳನೇತ್ರನೆ ಬರಲಿ ಬಿಡುವೆನೆ |
ಕಾಳಗದ ಕೊಬ್ಬಿಳಿಸಿ ಬಂಧಿಸಿ |
ಬಾಲಕಗೆ ಬಿಡದೀವೆ ಕಾರಾಗಾರ ಕಪ್ಪವನು || 207 ||

**ಮಾರವಿ - ಏಕ**

ಕಲಿ ಜಯಸೇನನು ಸಮರವ ನಿಶ್ಚೈಸ |
ಸಲು ಸಚಿವಾಗ್ರಣಿಯು ||
ಲಲಿತಾಕ್ಷನು ಬೇಗದಿ ಕೂಡಿದನತಿ |
ಬಲ ಸಂದೋಹವನು || 208 ||

ಏನೆಂಬೆನು ಧುರಪೌರುಷವೀ ಜಯ |
ಸೇನನು ಪೊರಮಡಲು ||
ಆನೆಯ ಪದಹತಿ ರಥ ಹಯದೋಟವು |
ಸೇನೆಯ ಸಂಭ್ರಮವ || 209 ||
ಬರುತಿಹ ಸೇನೆಯ ಕಾಣುತ ನೃಪಸುತ |
ನೊರೆದನು ಸುಮತಿಯೊಳು ||
ಅರಿತಿಹೆನಲ್ಲವನೀತನ ಬಗೆಯೊಳ |
ಗರುಹೈ ವಿವರವನು || 210 ||

**ಕೇದಾರಗೌಳ - ಝಂಪೆ**
ನರವರನೆ ಕೇಳು ಖ್ಯಾತ | ಜಯಸೇನ |
ದೊರೆ ಕಾಮರೂಪಕೀತ ||
ಧುರವೀರ ಸುಗುಣ ಸಿಂಧು | ಸಂಗರದಿ |
ಶರಣಾಗಲಿಲ್ಲವೆಂದು || 211 ||
ಇವನ ವಂಶದೊಳು ಹಿಂದೆ | ಪಡೆದಿಹರು |
ಶಿವನ ಕಾರುಣ್ಯದಿಂದೆ ||
ಭುವನೈಕಮಾದಸಿಯನು | ಕಾಣೆನೈ |
ಹವಣಾಗುವಸ್ತ್ರಗಳನು || 212 ||
ಲಲಿತಾಕ್ಷನೆಂಬನಿವಗೆ | ಮಂತ್ರಿಯಹ |
ಸಲೆನಿಷ್ಠ ಪ್ರೀತ ಪ್ರಜೆಗೆ ||
ಕೊಳುಗುಳಕೆ ನಿಂತರವನು | ಚತುರಂಗ |
ಬಲವೆಲ್ಲ ಸವರದಿಹನು || 213 ||
ಇಂದಿನಾಹವದಿ ಜಯವ | ಗಳಿಸೆ ಗೋ |
ವಿಂದ ದೋರುವನು ದಯವ ||
ಬಂದುದಾ ನೃಪನ ದಳವು | ನೋಡಿರೈ |
ಸಿಂಧುಸಮ ಶತ್ರು ಬಲವು || 214 ||

**ವಾರ್ಧಕ (ಪೂರ್ವಾರ್ಧ)**
ಅನಿತರೊಳು ಪರಸೈನ್ಯ ಕಾರ್ಮುಗಿಲು ಕವಿವಂತೆ |
ಜನಪಕುವರನ ಬಲದ ಮೇಲೆರಗೆ ಹೊಂದೇರ |
ನನಿತು ದೂರದಿ ನಿಲಿಸಿ ನಸುನಗುತ ಹರ್ಷವರ್ಧನನೆಂದ ಭೂಕಾಂತಗೆ ||

**ಹಂಸಧ್ವನಿ - ಅಷ್ಟ**
ಘನವಾಯ್ತು ನೀ ದೊರಕಿದೆಯಿಂದು ಬಯಸಿರ್ದೆ |
ರಣಶೂರನೋರ್ವನನು ||
ದಣಿವಂತೆ ಸಂಗರವೆಸಗುತ್ತ ತೀರ್ಚುವೆ |
ಮನದಭಿಲಾಷೆಯನ್ನು || 215 ||
ನುಡಿಗೇಳ್ಬು ಮಗುಳೆಂದ ಭೂಮೀಶ ಬೇಡವೈ |
ಹುಡುಗಾಟವೆನ್ನಿದಿರು ||
ಪೊಡವಿ ಮೂರೊಳಗೆನ್ನ ಕೆಣಕುವ ಸಾಹಸ |
ನುಡಿಯರು ಬಲ್ಲವರು || 216 ||
ಬಲ್ಲವರ್ಮಾತಿರಲೀಗಲೆ ನಿರ್ಣೈಪೆ |
ಜಳ್ಳು ಮಾತುಗಳ್ಯಾಕೆ ||
ನಿಲ್ಲೆಲೊ ನಿನ್ನನು ಜೈಸದೆ ಪೋದರೆ |
ಫುಲ್ಲಲೋಚನನಾಣೆಯು || 217 ||
ಪಂಥವೇಕೆನ್ನೊಳು ನೃಪಸೂನು ನಿನಗೆ ಮಾ |
ರಾಂತು ನಿಲ್ಲೆನು ನಾನು ||
ಅಂತರಂಗದೊಳತಿ ಮರುಕವು ತೋರ್ಪುದು |
ಸಂತೈಸು ಧುರವನ್ನು || 218 ||

ಅರರೆ ನಾಟಕ ನೋಡೆ ಬಂದೆನೆ ನಾನೀಗ |
ಬರಿದೆ ಬಣ್ಣಿಸದಿರಯ್ಯ ||
ದುರಕಂಜಿದೊಡೆ ಕಪ್ಪವನಿತ್ತರೀಗಲೆ |
ತೆರಳುವೆ ವಹಿಲದಿಂದ || 219 ||
ಸೀಳುವೆ ನಾಲಿಗೆ ಕಪ್ಪವ ಕೇಳ್ವರೆ |
ಬಾಲನೆನುವ ಭಾವದಿ ||
ತಾಳಿದರತಿಯಾಯ್ತು ಮಾತುಗಳೆಲೆ ಮೂಢ |
ಕಾಲ ತೀರಿದೆ ನಿನಗೆ || 220 ||

**ವಾರ್ಧಕ (ಉತ್ತರಾರ್ಧ)**
ಎನುವ ಭೂಪಾಲಕನ ನುಡಿಗೆ ನೃಪತನಯನತಿ |
ಕನಲಿ ಚಾಪವ ತುಡುಕಿ ಸಿಂಜಿನಿಯ ಝೇಗೆಯ್ದು |
ಕಣೆಗಳಂ ತೂರಲ್ಕೆ ಜಯಸೇನ ಬಿಲ್ವಿಡಿದು ಪಲ್ಗಡಿಯುತಿದಿರಾದನು || 221 ||

**ಶಂಕರಾಭರಣ - ಮಟ್ಟೆ**
ಹುಡುಗತನದೊಳೆನ್ನ ಕೆಣಕಿ ಕೆಟ್ಟೆ ತರಳನೆ |
ಬಿಡುವೆ ಶರಗಳಿದಕೆ ಜೀವ ತೆರುವೆ ಮರುಳನೆ ||
ಜಡಿಯೆ ಬಾಣವ್ರಾತ ಮುಸುಕಲವನ ತೇರನು |
ಇಡಿದ ಕತ್ತಲಲ್ಲಿ ತೊಳಲಿ ಜನಪ ಕುವರನು || 222 ||
ಉರಿಯುತೆದ್ದು ತರಳ ಘೋರ ಸರಳ ಪೂಡಿದ |
ಉರಿಯನುಗುಳ್ವ ವಿಶಿಖದಿಂದಲೆಲ್ಲ ಸವರಿದ ||
ಅರರೆ ಭೂಪ ತಾಳು ತಾಳೆನುತ್ತಲೆಚ್ಚನು |
ಅರಸ ಪಿಡಿದ ಧನುವ ಕ್ಷಣದಿ ಕುವರ ಕಡಿದನು || 223 ||
ಕರದ ಚಾಪ ಮುರಿಯಲರಸನರಿದನಾಕ್ಷಣ |
ಸರಳ ಮೊನೆಯೊಳಿವನ ಗೆಲಲು ತೀರದೀ ರಣ ||
ತರಳನನ್ನು ಜೈಸದಿಂದು ಪೋಗೆನೆನುತಲಿ |
ಒರೆಯ ಮರೆಯೊಳಿರ್ದ ಖಡುಗ ಹಿರಿದ ಭರದಲಿ || 224 ||
ಹರನ ವರದ ಖಡ್ಗವೆಂದು ತಿಳಿದು ಕುವರನು |
ಭರದಿ ಕ್ರೂರ ಸರಳನೊಂದ ಪೂಡಿ ನಿಂದನು ||
ಅರಸ ತೋರು ನಿನ್ನ ಚಳಕವೆಂದು ಜರೆಯುತ |
ಶರದ ರುಚಿಯ ತೋರ್ಪೆನೀಗಲೆಂದ ಗಜರುತ || 225 ||
ಪೋರತನವು ನಡೆಯದೀಗಲೆಲವೊ ಹುಡುಗನೆ |
ತೀರಿತಿಂದು ನಿನ್ನ ಹರಣದಾಸೆ ದಡಿಗನೆ ||
ಮಾರವೈರಿಯಿತ್ತ ಖಡುಗವಿಹುದು ಖೂಳನೆ |
ಮೂರುಲೋಕವಂಜುತಿಹುದು ಬಲಕೆ ಬಾಲನೆ || 226 ||

**ಸೌರಾಷ್ಟ್ರ - ತ್ರಿವುಡೆ**
ಶಿರವ ಛೇದಿಪೆನೆಂದು ಗರ್ಜಿಸು |
ತರಸ ತನ್ನಯ ಒರೆಯೊಳಿರ್ದಾ |
ಹರನು ಕರುಣದೊಳಿತ್ತ ಖಡ್ಗಕೆ | ಕರವನಿಕ್ಕೆ || 227 ||
ಭರದಿ ಸಿಂಜಿನಿಯೆಳೆದು ಹರ್ಷನು |
ಗುರಿಯ ನೋಡುತಲೆಚ್ಚಮಾರ್ಗಣ |
ವಿರದೆ ಛೇದಿಸೆ ನೃಪನ ದಕ್ಷಿಣ ಕರವನಾಗ || 228 ||

**ಭಾಮಿನಿ**
ಅಗಜೆಯಾಳ್ವನು ಕೊಟ್ಟ ಖಡ್ಗವ |
ಸುಗಿವನಿತರೊಳು ಬಲದ ಹಸ್ತವು |
ಚಿಗಿದು ಬೀಳಲು ಕಳವಳಿಸಿ ನೃಪ ಮೂರ್ಛೆಗೊಳಗಾದ ||
ಜಗದಿ ಬಿದ್ದಿಹ ದೊರೆಯನೀಕ್ಷಿಸಿ |
ದುಗುಡದಿಂದಸು ತೊರೆದನೆಂದೇ |
ಬಗೆದು ಬಳಿಗೈತಂದು ಮರುಗಿದ ಸಚಿವ ಲಲಿತಾಕ್ಷ || 229 ||

**ನೀಲಾಂಬರಿ - ರೂಪಕ**
ಯಾತಕೆ ಸೈನ್ಯವ ನೆರಹಿದೆ | ಯಾತಕೆ ಸಂಗರ ನಿಲಿಸಿದೆ |
ಭೂತಳ ಪಾಲಕ ಮೌನವ | ನೇತಕೆ ತಾಳಿಹೆಯೊ || 230 ||
ಶಂಕರನಿತ್ತಿಹ ಖಡ್ಗದಿ | ಶಂಕೆಯ ತಾಳ್ದೆಯ ವೈರಿಭ |
ಯಂಕರನದಕೀ ತೆರ ಕಡು | ಸಂಕಟ ಬಂತೀಗ || 231 ||
ನೆತ್ತರೊಳದ್ದಿದ ಕೈಯೊಳು | ಹಸ್ತವ ಕಾಣೆನು ಹರಹರ |
ಎತ್ತಲು ಪೋದುದೊ ತೀರಿತೆ | ಎತ್ತೇರ್ದನ ಕರುಣ || 232 ||
ಪೊಡವಿಪ ನಿನ್ನ ಸಹಾಯಕೆ | ಒಡಲೀಯದೆ ಕೊಲಿಸಿದೆನೈ |
ಕಡುಪಾಪಾತ್ಮನು ನಾನೆಲ | ಸುಡಲೀ ಬಾಳುವೆಯು || 233 ||
ಭೂಮಿಪ ನಿನ್ನೆಡೆಗೈದುವೆ | ಪಾಮರಗಪ್ಪಣೆ ಕೊಡು ಸಂ |
ಗ್ರಾಮಕೆ ನಾ ತೋರುವೆನೆಂ | ತೀ ಮೊಗ ಪುರದಲ್ಲಿ || 234 ||
ನೀನಿಲ್ಲದ ರಾಜ್ಯವನೆಂ | ತಾನುರೆ ಸಂತೈಸಲಿ ತವ |
ಮಾನಿನಿಗೇನುಸುರಲಿ ಕಡು | ಮೌನವ ಬಿಡು ದೊರೆಯೆ || 235 ||

**ಭಾಮಿನಿ**
ಅರಸ ಮೂರ್ಛೆಯ ತಿಳಿದು ಮೆಲ್ಲನೆ |
ಧರಣಿಯಿಂದೇಳುತಿರೆ ಛೇದಿತ |
ಕರವನೀಕ್ಷಿಸಿ ಮಂತ್ರಿಯಳಲಿದನಲ್ಲ ಸಮಯದಲಿ ||
ಮರೆದು ಚಿಂತೆಯ ಒಡಬನಂದದೊ |
ಳುರಿಯ ಸೂಸುತ ಕೆರಳಿ ಕೂಗಿದ |
ಕರವ ಕಡಿದನ ಶಿರವಕೊಳ್ಳದೆ ಬಿಡೆನು ತಾನೆನುತ || 236 ||

**ಕಂದ**
ಅಲುಗುಗಿದುನಿಂದಿಹ ಸಚಿವ |
ಲಲಿತಾಕ್ಷನನೀಕ್ಷಿಸುತ ದುಡುಕುವನೆನುತಂ ||
ಜಲಧಿವಸನೇಶನುಸುರಿದ |
ಸಲೆಮುಳಿದುರವಣಿಪ ಧೀರಮಂತ್ರಿಯೊಳಾಗಂ || 237 ||

**ಶಂಕರಾಭರಣ - ಆದಿ**
ಕೇಳು ಕೇಳೆಲೊ ಸಚಿವ ಶಿರೋಮಣಿ |
ತಾಳೆಲೊ ಮಂತ್ರೀ ಜನರ ಮುಕುಟಮಣಿ ||
ಕಾಳಗಕಲಿ ನೀ ಸಂಶಯವಿಲ್ಲಾ |
ಕಾಲವರಿಯಲೀ ಕ್ರೋಧತರವಲ್ಲಾ || 238 ||
ಪುರವೈರಿಯ ಕರವಾಲವ ಸುಗಿವಾ |
ಕರವನು ಕಣೆಯಲಿ ಬಾಲನು ಕಡಿದಾ ||
ಧರಣಿಪ ಸಂಭವನತಿ ಬಲವಂತನು |
ಭರಿತವಿವೇಕ ಸುಶೀಲನು ಶಾಂತನು || 239 ||
ಪೃಥ್ವಿಪಕುವರನ ಸ್ನೇಹದಿ ಕಂಡೂ |
ಕತ್ತಿಯನೆನ್ನಯ ಕಾಣಿಕೆಯೆಂದೂ ||
ಇತ್ತಾತನ ಮನ್ನಿಸಿ ಕಳುಹಲುಬೇಕು |
ಚಿತ್ತದೊಳಿನ್ನೀ ಕ್ಷಾತ್ರಮದ ಸಾಕು || 240 ||

ಧನಕನಕ ವಸನ ಘನಭೂಷಣವಾ |
ಮಣಿರಥ ಹಯಶತ ದಶವಾರಣವಾ ||
ಘನತೆಯೊಳಿಂದೀಯುತ ನೃಪಜಾತನ |
ಮನವನು ತೋಷಿಸು ಧುರವಿಖ್ಯಾತನ || 241 ||
ಬಳಲಿದೆನೀಕರದಿಂದಲಿ ರಕ್ತವು |
ಸಲೆಪೋದುದು ಕುಂದಿತು ನಿಜ ಶಕ್ತಿಯು ||
ತಳುವದೆ ತೆರಳುವೆನಾನರಮನೆಗೈ |
ತಳೆದಿಹ ಕಾರ್ಯದ ಭಾರವು ನಿನಗೈ || 242 ||

**ಭಾಮಿನಿ**
ಇನಿತು ಲಲಿತಾಕ್ಷಂಗೆ ನೇಮಿಸಿ |
ಜನಪ ರಥವೇರಿದನು ಕಾವಲ |
ಜನಸಹಾಯದಿ ಮಗುಳೆ ಸಾರಥಿಯೊಯ್ದ ಪುರದೆಡೆಗೆ ||
ಘನ ವಿವೇಕಿಯು ಬಳಿಕ ನಡೆದನು |
ವಿನಯದಿಂದಾ ಖಡುಗಸಹಿತಲಿ |
ಜನಪಕುವರನ ಕಾಂಬ ಹವಣದಿ ಚಾಪವನು ಬಿಸುಟು || 243 ||

**ಸೌರಾಷ್ಟ್ರ - ತ್ರಿವುಡೆ**
ಎಲೆವೊ ಮಂತ್ರಿಯೆ ಮಾರ್ಮಲೆತ ರಿಪು |
ಬಲಕೆ ಬವರವಕೊಡದೆ ಕೈಯೊಳ |
ಗಲಗನೇತಕೆ ಬರಿದೆ ಪಿಡಿದಿಹೆ | ಫಲವದೇನೈ || 244 ||
ಹರುಷನೀತೆರ ಜರೆದು ನುಡಿವುದ |
ನರಿತು ನಸುನಗುತೆಂದನೆಲೆ ನೃಪ |
ತರಳ ನಿನ್ನೊಳು ಸಂಧಿಗೈಯಲು | ಭರದಿ ಬಂದೆ || 245 ||
ಹಿಂದೆ ನಮ್ಮಣ್ಣನೊಳು ಸಚಿವನು |
ಸಂಧಿಯೆಸಗಿದ ಪರಿಯ ಬಲ್ಲೆವು |
ಮಂದಮತಿಗಳ ತಂಡವಿದೆನುತ | ಬಂದೆಯೇನೈ || 246 ||
ಕೇಳಿ ಬಲ್ಲೆನು ಕಥೆಯನಾದರೆ |
ಮಾಳವದ ಶಶಿಗುಪ್ತನಂದದಿ |
ಖೂಳರಾಪರೆ ಭೂತಳದಿ ಸಚಿ | ವಾಳಿಯೆಲ್ಲ || 247 ||
ಅಲ್ಲದಿರಲೀತೆರದ ಸಮರವ |
ನಿಲ್ಲಿಪುದು ಭೂಭುಜರ ಘನತೆಗೆ |
ಸಲ್ಲದಿಂದಿನ ಧುರಪರಾಕ್ರಮಿ | ಯೆಲ್ಲಿ ಪೋದ || 248 ||
ವಿಜಯ ನಿಮಗಾದ ಬಳಿಕಿನ್ನೇ |
ಕೆ ಜಗಳವು ನೃಪ ಸೋಲ್ದೊಡಾತನ |
ನಿಜಗುಣಾವಳಿ ಘನತೆ ಪೋಪುದೆ | ಸುಜನರಿಂಗೆ || 249 ||
ಗೆಲುವು ನಮದೆಂದೊಪ್ಪಿ ನೀವಿಂ |
ದೊಲಿದು ಕಪ್ಪವನಿತ್ತು ಮನ್ನಿಸೆ |
ಛಲದಿ ಬಂದವರಲ್ಲ ನಿಮ್ಮೊಳು | ಕಲಹಕಾಗಿ || 250 ||
ಮೃಡನ ಕರುಣದಿ ಪಡೆದ ಪೂರ್ವದ |
ಖಡುಗವಿದು ನೃಪನಿತ್ತ ಕಾಣಿಕೆ |
ಪಿಡಿದು ಬಂದಿಹೆನೊಪ್ಪಿಸಲು ಕಟು | ನುಡಿಗಳೇಕೆ || 251 ||

**ವಾರ್ಧಕ**
ಲಲಿತಾಕ್ಷನಿಂತೆನಲು ಮನಮೆಚ್ಚಿ ಹೊಂದೇರ |
ನಿಳಿದೈದಿ ತೋಷದಲಿ ಮಂತ್ರಿಯನು ಬಿಗಿದಪ್ಪಿ |
ಮುಳಿದು ನಾವೆಂದ ನುಡಿಗಳನೆಲ್ಲ ಮರೆದು ಮನ್ನಿಸಿರೆಂದನಾಹರ್ಷನು ||
ಕಲಹದಲಿ ನುಡಿದುದಂ ನೇಹದಲಿ ನೆನೆಸುವರೆ |
ಅಲಗಿದಂ ಕೈಗೊಂಡು ಪುರದಿಂದ ಬಂದಿರ್ಪ |
ಹಲವುತರ ವಸ್ತುವಾಹನವೆರಸಿ ಪೋಪುದೊಲವಿಂದೆಂದ ಲಲಿತಾಕ್ಷನು || 252 ||

**ಭಾಮಿನಿ**
ಮಿಗೆಮಹೋತ್ಸವದಲಿ ಹರ್ಷನು |
ವಿಗಡ ಖಡ್ಗವ ಕೊಂಡು ಕಾಣಿಕೆ |
ಮಿಗಲು ಕಾಂಚನ ತುರಗ ವಾರಣ ರಥಗಳೊಗ್ಗಿನಲಿ ||
ಬಿಗಿದ ಸಖ್ಯದಿ ಮಂತ್ರಿಮೌಳಿಯ |
ಸೊಗಸಿನಲಿ ಬೀಳ್ಕೊಂಡು ತಾ ನಿಜ |
ನಗರಿಗೈದಿದ ಸಕಲ ಸೈನಿಕವೆರಸಿ ಮುದದಿಂದ || 253 ||

**ಮಧುಮಾಧವಿ - ತ್ರಿವುಡೆ**
ಧರ್ಮ ದೇವತೆಯೊಲಿದು ಹರಸುವ |
ಕರ್ಮಭೂಮಿಯದಾಯ್ತು ಸಹನೆಯ |
ಮರ್ಮವರಿತಾ ಪ್ರಜರು ಶಾಂತಿಯ |
ಸಮ್ಮುದದೊಳಾಳಿರ್ದರು || 254 ||
ಹಿಂದು ಬೌದ್ಧರು ಜೈನ ಯವನರು |
ಬಂಧು ಭಾವದಿ ಬಾಳುತಿರ್ದರು |
ಒಂದೆ ಮನೆಯವರಂತೆ ಸೌಖ್ಯದೊ |
ಳಂದು ಸತ್ಯಸುಶೀಲರು || 255 ||
ಅರಸನಾಶಯದಂತಮಾತ್ಯರು |
ಕರಣಿಕರು ಸೇನಾಧಿಪರು ನಾ |
ಗರಿಕ ಸಂದೋಹವಿರೆ ನಾಡಿನ |
ಗರಿಮೆ ದಾಟಿತು ಗಡಿಗಳ || 256 ||

**ಮಂಗಲ ಪದ**
ಶಾಂತವಿಗ್ರಹ ಶೇಷತಲ್ಪಗೆ |
ಕಾಂತಿಕೋಟಿಯ ಕಮಲನಾಭಗೆ |
ಸಾಂತಲೋಕದನಂತರೂಪಗೆ |
ಮಂಗಲಂ ಜಯ ಮಂಗಲಂ || 257 ||
ಭುವನಚೇತನ ಸತ್ಯ ನಿತ್ಯಗೆ |
ಭವನಿವಾರಣ ಭಯವಿನಾಶಗೆ |
ಶಿವನಿಕೇತನ ಯೋಗಿ ವಂದ್ಯಗೆ |
ಮಂಗಲಂ ಜಯ ಮಂಗಲಂ || 258 ||
ಸುರರ ಪಾಲಿಪ ಲಕುಮಿಕಾಂತಗೆ |
ಕರುಣಸಾಗರ ನೀಲವರ್ಣಗೆ |
ತಿರುಮಲಾಧಿಪ ವೆಂಕಟೇಶಗೆ |
ಮಂಗಲಂ ಜಯ ಮಂಗಲಂ || 259 ||
ಶಾಂತಾಕಾರಂ ಭುಜಗಶಯನಂ ಪದ್ಮನಾಭಂ ಸುರೇಶಂ |
ವಿಶ್ವಾಕಾರಂ ಗಗನ ಸದೃಶಂ ಮೇಘವರ್ಣಂ ಶುಭಾಂಗಂ |
ಲಕ್ಷ್ಮೀಕಾಂತಂ ಕಮಲನಯನಂ ಯೋಗಿಹೃದ್ಧ್ಯಾನಗಮ್ಯಂ |
ವಂದೇ ವಿಷ್ಣುಂ ಭವಭಯಹರಂ ಸರ್ವಲೋಕೈಕನಾಥಂ || 260 ||

*****ಶುಭಂ*****

# ಕೃತಜ್ಞತೆಗಳು

**ಅಂತರಜಾಲ ಪ್ರಕಾಶನ ಪ್ರಾಯೋಜಕರು:** ಕರ್ನಾಟಕ ಯಕ್ಷಗಾನ ಅಕಾಡೆಮಿ, ಕರ್ನಾಟಕ ಸರ್ಕಾರ

**ಮೂಲ ಪ್ರಕಾಶಕರು:** ನೈಮಿಷ ಪ್ರಕಾಶನ, ಅಮಚಿ, ಶಿವಮೊಗ್ಗ ಜಿಲ್ಲೆ

**ಪ್ರಸಂಗ ಪ್ರತಿ ಆಧಾರ:** ಕವಿಯ ಮೂಲಪ್ರತಿ

**ಪ್ರಸಂಗ ಪ್ರತಿ ಕೊಟ್ಟವರು:** ಅಶೋಕ ಮುಂಗಳಿಮನೆ

**ಪ್ರಸಂಗ ಪ್ರತಿ ಒದಗಣೆಗೆ ಸಹಕಾರ:** ಅಶೋಕ ಮುಂಗಳಿಮನೆ

**ಅಂತರಜಾಲ ಪ್ರತಿ ಬರವಣಿಗೆ:** ಅಶೋಕ ಮುಂಗಳಿಮನೆ

**ಅಂತರಜಾಲ ಪ್ರತಿ ತಿದ್ದುಪಡಿ:** ಶ್ರೀಧರ ಡಿ. ಎಸ್., ಗಿಂಡೀಮನೆ ಮೃತ್ಯುಂಜಯ

**ಅಂತರಜಾಲ ಪ್ರತಿ ಉತ್ಪಾದನೆ:** ರವಿ ಮಡೋಡಿ, ನಟರಾಜ ಉಪಾಧ್ಯ, ಅಶ್ವಿನಿ ಹೊದಲ

**ಅಂತರಜಾಲ ಪ್ರತಿ ಪ್ರಕಾಶನ:** ರವಿ ಮಡೋಡಿ, ಡಾ. ಪ್ರದೀಪ ಸಾಮಗ, ನಟರಾಜ ಉಪಾಧ್ಯ